# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಜುಲೈ 2014
ಬೆಲೆ ರೂ. 1

ಇಂದಿನ ಶಿಕ್ಷಣ ಪದ್ಧತಿಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಯಾವ ಭಾಷಾ ಮಾಧ್ಯಮದಲ್ಲಿ ನೀಡಬೇಕು ಎಂದು ಗೊಂದಲದಲ್ಲಿರುವಾಗ ದೇಶದ ಸುಪ್ರೀಂ ಕೋರ್ಟ್ ಶಿಕ್ಷಣವನ್ನು ಮಕ್ಕಳ ಹಾಗೂ ಅವರ ಹೆತ್ತವರ ನಿರ್ಧಾರದಂತೆ ಆಯ್ಕೆ ಮಾಡಬೇಕು ಎಂದು ನಿರ್ಣಯವನ್ನು ಕೊಟ್ಟಿದೆ.

ದೆಹಲಿ ಕರ್ನಾಟಕ ಸಂಘವು ಸಾಹಿತ್ಯ ಸಂಜೆ ಕಾರ್ಯಕ್ರಮದಲ್ಲಿ ಈ ಕುರಿತು ಚರ್ಚೆಯನ್ನು ಆರಂಭಿಸಿದೆ

## ಶಿಕ್ಷಣ ಭಾಷಾ ಮಾಧ್ಯಮ ಮತ್ತೊಂದು ತಿರುವು

# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 24 ಸಂಚಿಕೆ 10
ಜುಲೈ 2014, ಬೆಲೆ ರೂ. 1



**ಅಭಿಮತ ಸಂಪಾದಕ ಮಂಡಳಿ**

ಬಾಲಕೃಷ್ಣ ನಾಯ್ಕ್ ಡಿ.
ಸವಿತಾ ಇನಾಮದಾರ್
ಪ್ರಕಾಶ್ ಶೆಟ್ಟಿ ಉಳೆಪಾಡಿ
ಆಶಾಲತಾ ಎಂ.

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ:
9958697823

**ಉಪಾಧ್ಯಕ್ಷರು**
ಬಸವರಾಜು ಬಿ.ಕೆ.:
9810391608
ಆಶಾಲತಾ ಎಂ.:
9891249149

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜ:
9811325440

**ಕೋಶಾಧಿಕಾರಿ**
ಡಾ. ಅವನೀಂದ್ರನಾಥ್ ರಾವ್
9868123382

**ಜಂಟಿ ಕಾರ್ಯದರ್ಶಿಗಳು**
ಎಸ್.ಸಿ. ಹೇಮಲತ:
9971121636
ಟಿ.ಎಂ. ಮೈಲಾರಪ್ಪ:
9868347461

**ಸಮಿತಿ ಸದಸ್ಯರು**
ಆಂಜನಿ ಗೌಡ:
9811165354
ರಾಧಾಕೃಷ್ಣ: ತ
9818252183
ಪೂರ್ಣಿಮಾ ಗೌಡ:
8860916899
ವಿ.ವಿ.ಬಿರಾದಾರ:
9873005409
ಪಿ.ಸಿ.ಶ್ರೀನಿವಾಸ್:
9868170790
ಆನಂದ ಮುರಗೋಡ:
9312931233
ಆಶಾ ಶ್ಯಾಮಸುಂದರ್:
9871256177
ಬಸವರಾಜ ಮೇಟಿ:
9810282951
ಟಿ.ಪಿ. ಬೆಳ್ಳಿಯಪ್ಪ:
9654555795
ಕುಸುಮಾ ಪಿ. ನಂದರಗಿ
9868393955

**ವಿಶೇಷ ಆಹ್ವಾನಿತರು**
ಐ. ರಾಮ ಮೋಹನ್ ರಾವ್
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ
ಅರವಿಂದ ಕೌಜಲಗಿ


## ನೇರ ಮಾತು

ಭಾಷಾ ನೀತಿಯ ಗೊಂದಲ, ಸರಕಾರಗಳ ದಿಟ್ಟ ನಿಲುವಿನ ಕೊರತೆ, ಸರ್ವೋಚ್ಚ ನ್ಯಾಯಾಲಯದ ಇತ್ತೀಚಿನ ನಿಲುವು, ಭಾಷಾ ಪ್ರೇಮದ ಅಭಾವ, ಶಿಕ್ಷಣ ತಜ್ಞರ ಅವೈಜ್ಞಾನಿಕ ಧೋರಣೆ. ಇತ್ಯಾದಿಗಳಿಂದ ಮಾತ್ರ ಭಾಷೆ ಮತ್ತು ನಾಡಿನ ಸಂಸ್ಕೃತಿ ಅವನತಿಯತ್ತ ಮುಖಮಾಡಿದೆ ಎಂಬುದು ನಮಗೆ ಸ್ಪಷ್ಟವಾಗಿ ಗೋಚರವಾಗುತ್ತದೆ. ಮೇ ತಿಂಗಳಲ್ಲಿ ದೆಹಲಿ ಕರ್ನಾಟಕ ಸಂಘ ಆಯೋಜಿಸಿದ 'ಸಾಹಿತ್ಯ ವೈವಿಧ್ಯ' ಕಾರ್ಯಕ್ರಮದಲ್ಲಿ ಶ್ರೀ ಸಖಾರಾಮ ಉಪ್ಪೂರು ಅವರು ಕನ್ನಡ ಮಾಧ್ಯಮ ಶಾಲೆಗಳು ಒಂದೊಂದಾಗಿ ಮುಚ್ಚಿ ಹೋಗುತ್ತಿರುವ, ಭಾಷೆ ಮತ್ತು ಸಂಸ್ಕೃತಿಯು ಸಂಪೂರ್ಣ ನಾಶವಾಗುವ ಭೀತಿಯ ಬಗ್ಗೆ ವಿವರವಾಗಿ ಚರ್ಚೆಯನ್ನು ಆರಂಭಿಸಿದರು. ಈ ಚರ್ಚೆಯ ನಂತರ ದೆಹಲಿ ಕರ್ನಾಟಕ ಸಂಘ ಈ ಮಹತ್ತರ ವಿಷಯದ ಬಗ್ಗೆ ಯೋಚಿಸುವಂತೆ ಮತ್ತು ಕಾರ್ಯಪ್ರವೃತ್ತವಾಗುವಂತೆ ಮಾಡಿತು. ಇದೇ ವಿಷಯದ ಮೇಲೆ ಜೂನ್ ತಿಂಗಳಲ್ಲಿ ಸಾಹಿತ್ಯ ವೈವಿಧ್ಯ ಕಾರ್ಯ್ಕ್ರಮದಲ್ಲಿ ಶಿಕ್ಷಣ ತಜ್ಞ ಡಾ. ಚಂದ್ರಶೇಖರ ದಾಮ್ಲೆ ಮತ್ತು ಡಾ. ವಾಣಿ ಸಂದೀಪ್ ಭಾಗವತ್ ಅವರಿಂದ ವಿಶೇಷ ವಿಷಯ ಮಂಡನೆ ಮತ್ತು ಈ ಕುರಿತು ಗಂಭೀರ ಚರ್ಚೆ ನಡೆಯಿತು. ಇದೀಗ ಜುಲೈ 20ರಂದು ದೆಹಲಿ ಕರ್ನಾಟಕ ಸಂಘವು "ಕನ್ನಡ ಭಾಷೆ, ಸಂಸ್ಕೃತಿ ಮತ್ತು ಶಿಕ್ಷಣ" ವಿಚಾರ ಕುರಿತು ವಿಶೇಷ ಚರ್ಚೆ ನಡೆಸಲಿದೆ. ಈ ಮೂರು ವಿಚಾರಗೋಷ್ಠಿಗಳಲ್ಲಿ ಚರ್ಚಿತವಾದ ವಿಷಯಗಳನ್ನು ಆಧರಿಸಿ ದೆಹಲಿ ಕರ್ನಾಟಕ ಸಂಘವು ಕರ್ನಾಟಕ ಸರಕಾರದ ಸಂಬಂಧಪಟ್ಟ ಇಲಾಖೆಗಳಿಗೆ ಸಂಘದ ಒಂದು ನಿರ್ಣಯವನ್ನು ಮಂಡಿಸಲಿದೆ. ರಾಜಧಾನಿ ದೆಹಲಿಯಲ್ಲಿ ಕುಳಿತು ಕನ್ನಡದ ಬಗ್ಗೆ ಕಾಳಜಿ ವಹಿಸಿ ದೆಹಲಿಯಲ್ಲಿ ಇರುವ ಮತ್ತು ದೆಹಲಿಗೆ ಬರುವ ಮತ್ತು ದೆಹಲಿಯಲ್ಲಿ ಇರುವ ಸಂಬಂಧಿತ ಸಂಸದರು, ಮಂತ್ರಿಗಳು ಮತ್ತು ಅಧಿಕಾರಿಗಳನ್ನು ಈ ಬಗ್ಗೆ ಯೋಚಿಸಿ ಕಾರ್ಯಪ್ರವೃತ್ತರಾಗುವಂತೆ ಮಾಡುವಲ್ಲಿ ನಾವೆಲ್ಲಾ ಒಗ್ಗಟ್ಟಾಗಿ ಸ್ಪಂದಿಸಬೇಕಾಗಿದೆ. ತಮ್ಮ ಕೆಲಸ ಕಾರ್ಯಗಳ ಒತ್ತಡದಿಂದ ಸ್ವಲ್ಪ ಬಿಡುವು ಮಾಡಿಕೊಂಡು ತಮ್ಮ ನಾಡು, ನುಡಿ ಮತ್ತು ಸಂಸ್ಕೃತಿಯನ್ನು ಉಳಿಸುವಲ್ಲಿ ತಮ್ಮೆಲ್ಲರ ಸಹಕಾರವನ್ನು ಕೋರುತ್ತಿದ್ದೇವೆ. ಪುರುಸೊತ್ತು ಮಾಡಿಕೊಂಡು ಸಂಘಕ್ಕೆ ಬನ್ನಿ... ಕನ್ನಡ ತಾಯಿಯ ಋಣ ತೀರಿಸುವ ಅಳಿಲು ಸೇವೆ ಮಾಡೋಣ.

ಕಾಸರಗೋಡು ಕರ್ನಾಟಕದ ಭಾಗವಾಗಿ ಇರಬೇಕೆಂದು ಪ್ರಯತ್ನಪಟ್ಟ ಕನ್ನಡದ ಹಿರಿಯ ಮತ್ತು ಶ್ರೇಷ್ಠ ಸಾಹಿತಿ, ಕವಿ ನಾಡೋಜ ಕಯ್ಯಾರ ಕಿಂಞಣ್ಣ ರೈ ಅವರು ಜೂನ್ ತಿಂಗಳ 8 ರಂದು ತನ್ನ ಜೀವನದ ನೂರು ವರ್ಷಗಳನ್ನು ಪೂರೈಸಿದರು. 'ಶತಮಾನ'ವನ್ನು ಕಂಡ ಕನ್ನಡದ ಈ ಹಿರಿಯ ಚೇತನಕ್ಕೆ ದೆಹಲಿ ಕರ್ನಾಟಕ ಸಂಘವು ಅಭಿನಂದನೆಗಳನ್ನು ಸಲ್ಲಿಸುತ್ತದೆ. ಅ

*ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು*

## ಮುನ್ನೋಟ

ಕಳೆದ ಎರಡು ತಿಂಗಳಲ್ಲಿ ಹೆಚ್ಚಿನ ಕನ್ನಡಿಗರು ಬೇಸಗೆಯ ರಜಾದಲ್ಲಿ ತವರೂರಿಗೆ ಹೋಗಿದ್ದರು. ಈ ಸಂದರ್ಭ ಸಂಘದಲ್ಲಿ ಕೆಲವು ಉತ್ತಮ ಸಾಹಿತ್ಯ ಚರ್ಚೆ ನಡೆದಿದೆಯಾದರೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಾವು ಆಯೋಜಿಸಿಲ್ಲ. ಇದೀಗ ಶಾಲಾ, ಕಾಲೇಜುಗಳು ಆರಂಭಗೊಂಡಿರುವುದರಿಂದ ಬಹುತೇಕ ಎಲ್ಲರೂ ಹಿಂತಿರುಗಿದ್ದಾರೆ. ಹಲವಾರು ಸಾಂಸ್ಕೃತಿಕ, ಆಟೋಟ, ಸಾಹಿತ್ಯ ಕಾರ್ಯಕ್ರಮಗಳನ್ನು ಆಯೋಜಿಸುವತ್ತ ಹೆಜ್ಜೆ ಇಟ್ಟಿದ್ದೇವೆ. ಈ ಅಭಿಮತ ತಮಗೆ ತಲುಪುವ ವೇಳೆಗೆ ನಮ್ಮ ಕಾರ್ಯಾವಧಿಗೆ (14.07.2014) ಒಂದು ವರ್ಷ ಪೂರ್ತಿಯಾಗಲಿದೆ. ಈ ಒಂದು ವರ್ಷದ ಅವಧಿಯಲ್ಲಿ ಸಂಘಕ್ಕೆ ಒಂದು ಹೊಸ ರೀತಿಯ, ಜನರನ್ನು ಸ್ಪಂದಿಸುವ ಸಾಂಸ್ಕೃತಿಕ, ಸಾಹಿತ್ತಿಕ ಕಾರ್ಯಕ್ರಮಗಳನ್ನು ಆಯೋಜಿಸುವ ಪ್ರಯತ್ನ ಮಾಡಿದ್ದೇವೆ. ಕ್ರೀಡಾಕೂಟ, ಕ್ರಿಕೆಟ್ ಪಂದ್ಯಾವಳಿಗಳಲ್ಲೂ ಹಲವು ಬದಲಾವಣೆಗಳ ಮೂಲಕ ಕ್ರೀಡಾಸಕ್ತರು ಸಂಘದತ್ತ ಬರುವಂತೆ ಪ್ರಯತ್ನಿಸಿದ್ದೇವೆ. ಮಕ್ಕಳಿಗಾಗಿ ವಿಶೇಷ ಕಾರ್ಯಕ್ರಮ, ಯುವಕರಿಗಾಗಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯುವ ಜನಾಂಗ ಸಂಘದಲ್ಲಿ ಸಕ್ರಿಯವಾಗುವಂತೆ ನೋಡಿಕೊಂಡಿದ್ದೇವೆ. ನಾಟಕಗಳಿಗೆ ಹೆಚ್ಚು ಒತ್ತುಕೊಟ್ಟು ರಂಗಾಸಕ್ತರನ್ನು ಸಂಘದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವಂತೆ ಮಾಡಿದ್ದೇವೆ. ಹಾಗೆಯೇ ಹಲವು ಸಂಗೀತ ಕಾರ್ಯಕ್ರಮಗಳ ಮೂಲಕ ಸಂಗೀತ ಪ್ರಿಯರೂ ಸಕ್ರಿಯರಾಗಿದ್ದಾರೆ.

ಇನ್ನು ಹತ್ತು ಹಲವು ಕಾರ್ಯಕ್ರಮಗಳನ್ನು ಮಾಡುವ ಚಿಂತನೆಯಿದ್ದರೂ ಸಮಯದ ಅಭಾವದಿಂದ ಮಾಡಲಾಗಲಿಲ್ಲ. ಮುಂದಿನ ದಿನಗಳಲ್ಲಿ ಅವೆಲ್ಲವನ್ನೂ ಕಾರ್ಯಗತಗೊಳಿಸುವ ಪ್ರಯತ್ನ ಮಾಡುತ್ತೇವೆ. ಸಹಕಾರ ನೀಡಿ ಪ್ರೋತ್ಸಾಹಿಸಿದ ತಮಗೆಲ್ಲಾ ಆತ್ಮೀಯ ಕೃತಜ್ಞತೆಗಳು. ಅ

*ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ*

### ದೆಹಲಿ ಕರ್ನಾಟಕ ಸಂಘದಲ್ಲಿ ತಿಂಗಳ ಕಾರ್ಯಕ್ರಮ

**20 ಜುಲೈ 2014**
ಸಾಯಂಕಾಲ 5 ಗಂಟೆಗೆ
ಸ್ಥಳ : ದೆಹಲಿ ಕರ್ನಾಟಕ ಸಂಘದ ವಿಚಾರ ಸಂಕಿರಣ ಸಭಾ ಭವನ
ಸಾಹಿತ್ಯ ಸಂಜೆ : ಚರ್ಚಾ ವಿಷಯ – ಕನ್ನಡ ಭಾಷೆ, ಸಂಸ್ಕೃತಿ ಮತ್ತು ಶಿಕ್ಷಣ

**27 ಜುಲೈ 2014**
ಸಾಯಂಕಾಲ 5 ಗಂಟೆಗೆ
ಸ್ಥಳ : ದೆಹಲಿ ಕರ್ನಾಟಕ ಸಂಘದ ಸಭಾಂಗಣ
ವಾರ್ಧಾಯಾತ್ರೆ ಪುಸ್ತಕ ಬಿಡುಗಡೆ

**19 ಜುಲೈ 2014**
ಸಾಯಂಕಾಲ 6 ಗಂಟೆಗೆ
ಕು. ಸಿಂಚನಾ ಮೂರ್ತಿ ಅವರ ಭರತನಾಟ್ಯ ರಂಗಪ್ರವೇಶ.

# ಕನ್ನಡ ಶಾಲೆಗಳನ್ನು ರಕ್ಷಿಸುವ ಅಗತ್ಯವಿದೆ- ಡಾ. ಚಂದ್ರಶೇಖರ ದಾಮ್ಲೆ




ವಿದ್ಯಾರ್ಥಿಗಳಿಲ್ಲದೇ ಕನ್ನಡ ಶಾಲೆಗಳು ಮುಚ್ಚುವಂತಹ ಪರಿಸ್ಥಿತಿ ಬಂದಿದೆ ಎಂದು ಶಿಕ್ಷಣ ತಜ್ಞ ಡಾ. ಚಂದ್ರಶೇಖರ ದಾಮ್ಲೆಯವರು ಹೇಳಿದರು. ಅವರು ದೆಹಲಿ ಕರ್ನಾಟಕ ಸಂಘವು ಜೂನ್ 23ರಂದು ಏರ್ಪಡಿಸಿದ ಸಾಹಿತ್ಯ ಸಂಜೆ ಕಾರ್ಯಕ್ರಮದಲ್ಲಿ ಮಾತಾಡುತ್ತಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ವಹಿಸಿದ್ದರು.

ಶಿಕ್ಷಕರ ಸಂಖ್ಯೆ ಕಡಿಮೆಯಿದ್ದು, ಗುಣಮಟ್ಟದ ಕೊರತೆಯಿರುವ ಸರಕಾರಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ಸೇರಿಸಲು ಹೆತ್ತವರು ಹಿಂಜರಿಯುತ್ತಾರೆ. ಇದರಿಂದ ಸರಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸೇರ್ಪಡೆಯು ಹಿಂದೆ ಇದ್ದುದಕ್ಕಿಂತ ಈಗ ಕೇವಲ ಹತ್ತು ಪ್ರತಿಶತದಷ್ಟಿದೆ ಎಂದು ಅವರು ವಿವರಿಸಿದರು. ಸರಕಾರಿ ಶಾಲೆಗಳು ಕ್ರಮೇಣ ಮುಚ್ಚುವಂತಹ ಪರಿಸ್ಥಿತಿ ಬಂದಿರುವುದರಿಂದ ಆ ಶಾಲೆಗಳಲ್ಲಿ ನಡೆಯುತ್ತಿರುವ ಕನ್ನಡ ಮಾಧ್ಯಮದ ಶಿಕ್ಷಣಕ್ಕೂ ಪೆಟ್ಟು ಬಿದ್ದಿದೆ ಎಂದು ಅವರು ತಿಳಿಸಿದರು. ಇದರಿಂದ ಕನ್ನಡ ಭಾಷೆಯ ಬೆಳವಣಿಗೆಯೂ ಕುಂಠಿತಗೊಳ್ಳಲಿದೆ ಎಂಬ ಭೀತಿಯನ್ನು ಡಾ. ದಾಮ್ಲೆ ಅವರು ವ್ಯಕ್ತ ಪಡಿಸಿದರು. ಸರಕಾರಿ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟವನ್ನು ಉತ್ತಮಗೊಳಿಸಿ, ವಿದ್ಯಾರ್ಥಿ–ಶಿಕ್ಷಕರ ಅನುಪಾತವನ್ನು ಹೆಚ್ಚಿಸಿ, ಕನ್ನಡ ಮಾಧ್ಯಮದಲ್ಲಿ ಕಲಿತರೂ ಉನ್ನತ ಶಿಕ್ಷಣ ಪಡೆದು ಉತ್ತಮ ಹುದ್ದೆಗಳಿಗೆ ಹೋಗುವಂತಹ ಅವಕಾಶಗಳಿವೆ ಎಂಬುದನ್ನು ಸಮಾಜಕ್ಕೆ ತಿಳಿಸಿ ಕನ್ನಡ ಮಾಧ್ಯಮದಲ್ಲಿ ಶಿಕ್ಷಣವನ್ನು ನೀಡುವ ಸರಕಾರಿ ಶಾಲೆಗಳನ್ನು ರಕ್ಷಿಸಬೇಕು ಎಂದು ಡಾ. ದಾಮ್ಲೆಯವರು ಒತ್ತಾಯಿಸಿದರು.

ಕನ್ನಡ ಭಾಷಾ ಮಾಧ್ಯಮದಲ್ಲಿ ಕಲಿತರೆ ಬದುಕಿನಲ್ಲಿ ಹೆಚ್ಚು ಅಭಿವೃದ್ಧಿಯಾಗುವುದಿಲ್ಲ ಎಂಬ ಮನಸ್ಥಿತಿಯಿಂದ ನಾವು ಹೊರಬರಬೇಕಾಗಿದೆ. ಈಗಾಗಲೇ ಕನ್ನಡ ಭಾಷಾ ಮಾಧ್ಯಮದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪಡೆದವರೆಷ್ಟೋ ಜನರು ದೇಶ ವಿದೇಶಗಳಲ್ಲಿ ಉನ್ನತ ಸ್ಥಾನಗಳನ್ನು ಗಳಿಸಿದ್ದಾರೆ. ಪ್ರಾದೇಶಿಕ ಭಾಷೆಗಳಲ್ಲಿ ಶಿಕ್ಷಣ ಪಡೆಯುವುದು ಒಂದು ತೊಡಕಾಗುವುದಿಲ್ಲ ಬದಲು ಅದು ತಮ್ಮ ಭಾಷೆ ಮತ್ತು ಸಂಸ್ಕೃತಿಯನ್ನು ಉಳಿಸಿ ರಕ್ಷಿಸುವಲ್ಲಿ ಸಹಕಾರಿಯಾಗುತ್ತದೆ ಎಂದು ಡಾ. ದಾಮ್ಲೆಯವರು ವಿವರಿಸಿದರು.

ಸಾಹಿತ್ಯ ಸಂಜೆ ಕಾರ್ಯಕ್ರಮದಲ್ಲಿ ಸೌದಿ ಅರೇಬಿಯಾ ಸರಕಾರದ ಮಾನವ ಸಂಪನ್ಮೂಲ ಇಲಾಖೆಯಲ್ಲಿ ಪ್ರಾಧ್ಯಾಪಕರಾಗಿರುವ ಕನ್ನಡದ ಲೇಖಕಿ ಡಾ. ವಾಣಿ ಸಂದೀಪ್ ಭಾಗವತ್ ಅವರು ಕೂಡಾ ಮಾತಾಡಿದರು. ಕನ್ನಡವನ್ನು ಪ್ರೀತಿಸುವ ಗುಣ ನಮ್ಮಲ್ಲಿರಬೇಕು. ನಾವು ಎಷ್ಟೇ ದೊಡ್ಡ ವಿದ್ಯಾವಂತರಾದರೂ ಯಾವುದೇ ಊರಿನಲ್ಲಿದ್ದರೂ ಕನ್ನಡಿಗರು ಭೇಟಿಯಾದಾಗ ಕನ್ನಡವನ್ನು ಮಾತಾಡುವಲ್ಲಿ ಹಿಂಜರಿಕೆ ಇರಬಾರದು. ಪರವೂರುಗಳಲ್ಲಿರುವ ಕನ್ನಡಿಗರು ಮನೆಯಲ್ಲಿ ಕನ್ನಡವನ್ನೆ ಮಾತಾಡಿ ಮಕ್ಕಳಿಗೂ ಕನ್ನಡ ಕಲಿಸಬೇಕು ಎಂದು ಅವರು ಕಿವಿಮಾತು ಹೇಳಿದರು. ವಿದೇಶದಲ್ಲಿದ್ದರೂ ತಾನು ಕುಟುಂಬದೊಳಗೆ ಕನ್ನಡವನ್ನೇ ಮಾತಾಡುವೆ ಎಂದ ಅವರು ಕನ್ನಡವನ್ನು ಮರೆತರೆ ಕ್ರಮೇಣ ಆ ಭಾಷೆಯ ಪ್ರಯೋಗವು ಕಡಿಮೆಯಾಗಿ ಸಂಸ್ಕೃತದಂತೆ ಪಠ್ಯದ ಭಾಷೆ ಮಾತ್ರವಾಗಬಹುದು ಎಂದು ಅವರು ಹೇಳಿದರು.

ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆಯವರು ತಮ್ಮ ಹಳೆಯ ಸ್ನೇಹಿತ ಡಾ. ಚಂದ್ರಶೇಖರ ದಾಮ್ಲೆಯವರನ್ನು ಸಭೆಗೆ ಪರಿಚಯಿಸಿದರು. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯದಲ್ಲಿ ಸ್ನೇಹಾ ಕನ್ನಡ ಶಾಲೆಯನ್ನು ಸ್ಥಾಪಿಸಿ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿರುವ ಡಾ. ದಾಮ್ಲೆಯವರ ಪ್ರಯತ್ನವು ರಾಜ್ಯದ ಎಲ್ಲೆಡೆಯೂ ಅನುಕರಿಸುವಂತಹದು. ಅದಕ್ಕೆ ಸರಕಾರದ ಸಂಪೂರ್ಣ ಸಹಕಾರ ಬೇಕಾಗಿದೆ ಎಂದು ಡಾ. ಬಿಳಿಮಲೆಯವರು ಹೇಳಿದರು.

ಅಧ್ಯಕ್ಷ ಶ್ರೀ ವಸಂತಶೆಟ್ಟಿ ಬೆಳ್ಳಾರೆ ಅವರು ಮಾತಾಡಿ ಕನ್ನಡದ ಉಳಿವಿಗಾಗಿ ಕನ್ನಡಶಾಲೆಗಳ ಸಬಲೀಕರಣದ ಅಗತ್ಯವನ್ನು ವಿವರಿಸಿದರು. ದೆಹಲಿ ಕರ್ನಾಟಕ ಸಂಘವು ಈಗಾಗಲೇ ಸಾಹಿತ್ಯ ಸಂಜೆ ಕಾರ್ಯಕ್ರಮಗಳ ಮೂಲಕ ಕನ್ನಡ ಭಾಷೆಯ ಉಳಿವು ಮತ್ತು ಬೆಳವಣಿಗೆಯ ಕುರಿತಾದ ಮಹತ್ವರ ಚಿಂತನೆ ಹಾಗೂ ಚರ್ಚೆಗಳನ್ನು ಆರಂಭಿಸಿದೆ. ಮಾತೃಭಾಷೆಯಲ್ಲಿ ಶಿಕ್ಷಣದ ಕುರಿತು ಇತ್ತೀಚೆಗೆ ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನ ಕುರಿತೂ ವಿವರವಾದ ಚರ್ಚೆ ಅಗತ್ಯ ಎಂದು ಅವರು ಹೇಳಿದರು.

ಸಾಹಿತ್ಯ ಸಂಜೆಯ ಕಾರ್ಯಕ್ರಮದಲ್ಲಿ ಡಾ. ಅಹಲ್ಯಾ ಚಿಂತಾಮಣಿ, ಡಾ. ರವಿಶಂಕರ್ ಎಸ್., ಡಾ. ಸಖಾರಾಮ ಉಪ್ಪೂರು, ಶ್ರೀ ಎಸ್. ನರಸಿಂಹ ಮೂರ್ತಿ, ಬರಹಗಾರ್ತಿ ಶ್ರೀಮತಿ ರೇಣುಕಾ ನಿಡಗುಂದಿ, ಡಾ. ಸಂದೀಪ್ ಭಾಗವತ್ ಮೊದಲಾದವರು ಸಕ್ರಿಯವಾದ ಚರ್ಚೆಯಲ್ಲಿ ಭಾಗವಹಿಸಿದರು.

ಸಂಘದ ಕೋಶಾಧಿಕಾರಿ ಡಾ. ವೈ. ಅವನೀಂದ್ರನಾಥ್ ರಾವ್ ಅವರು ಸ್ವಾಗತಿಸಿ ಕಾರ್ಯಕ್ರಮ ನಿರ್ವಹಿಸಿದರು. ಕಾರ್ಯಕಾರಿ ಸಮಿತಿಯ ಸದಸ್ಯೆ ಶ್ರೀಮತಿ ಆಶಾ ಶ್ಯಾಮಸುಂದರ್ ಅವರು ವಂದಿಸಿದರು. ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಟಿ.ಪಿ. ಬೆಳ್ಳಿಯಪ್ಪ ಅವರು ಕೂಡಾ ಉಪಸ್ಥಿತರಿದ್ದರು. ಅ

***ಅಭಿಮತ ವರದಿ***



**ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 8860848585 – 011-26109615,** 011-26104818

# ಭರತಾದ್ರಿ ದಂಪತಿಗಳಿಗೆ ಬೀಳ್ಕೊಡುಗೆ

ದೆಹಲಿ ಕರ್ನಾಟಕ ಸಂಘದ ಮಾಜಿ ಉಪಾಧ್ಯಕ್ಷೆ ಮತ್ತು ಸಂಘದ ಮುಖಪತ್ರಿಕೆ 'ಅಭಿಮತ'ದ ಪ್ರಧಾನ ಸಂಪಾದಕಿಯಾಗಿ ಸೇವೆ ಸಲ್ಲಿಸಿದ ಶ್ರೀಮತಿ ಉಷಾ ಭರತಾದ್ರಿ ಮತ್ತು ಅವರ ಪತಿ ದೂರದರ್ಶನ ಕೇಂದ್ರದಲ್ಲಿ ಕಾರ್ಯನಿರ್ವಹಿಸಿ ನಿವೃತ್ತರಾದ ಶ್ರೀ ರಜತಾದ್ರಿ ಭರತಾದ್ರಿ ಅವರಿಗೆ ಸಂಘದ ವತಿಯಿಂದ ಆತ್ಮೀಯ ಬೀಳ್ಕೊಡುಗೆ ನೀಡಲಾಯಿತು. ಸಂಘದಲ್ಲಿ ಜೂನ್ 3 ರಂದು ನಡೆದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ವಹಿಸಿದ್ದರು.

ಈ ಸಂದರ್ಭದಲ್ಲಿ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತನಾಡಿ ಚುನಾವಣೆಗಳು ಕೆಲವೊಮ್ಮೆ ಮಿತ್ರರನ್ನು ದೂರವಾಗಿಸುತ್ತದೆ. ಪ್ರಜಾಸತ್ತಾತ್ಮಕತೆಯ ಮೇಲೆ ನಿಂತಿರುವ ಸಂಘಕ್ಕೆ ಚುನಾವಣೆ ಅನಿವಾರ್ಯ, ಮಿತ್ರರು ಮಿತ್ರರಾಗಿಯೇ ಉಳಿದು ಸರ್ವರೂ ಸಂಘದ ಏಳ್ಗೆಗಾಗಿ ಸದಾ ಶ್ರಮಿಸೋಣ ಎಂದರು. ಕಹಿ ನೆನಪುಗಳನ್ನು ಇಲ್ಲಿಯೇ ಮರೆತು ಕೇವಲ ಸಿಹಿ ನೆನಪುಗಳು ಹಾಗು ಶುಭ ಹಾರೈಕೆಗಳೊಂದಿಗೆ ತಾಯ್ನಾಡಿತ್ತ ಸಾಗಬೇಕೆಂದು ವಿನಂತಿಸಿದರು.

ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಯಾಗಿ ಕನ್ನಡ ಕಾರ್ಯಕ್ರಮ ನಿರ್ವಹಣೆಯ ಕೆಲಸದಲ್ಲಿ ಉತ್ತಮ ಪ್ರಭುತ್ವ ಗಳಿಸಿದ್ದ ಉಷಾ ಭರತಾದ್ರಿಯವರು ಸಂಘದ ಕನ್ನಡದ ವೀಕ್ಷಕರಿಗೆಲ್ಲ ಚಿರಪರಿಚಿತರಾದರೆ, ಇವರ ಪತಿ ರಜತಾದ್ರಿಯವರು ಸಂಘ ಮತ್ತು ಕನ್ನಡ ಶಾಲೆಯ ಪದಾಧಿಕಾರಿಗಳಿಗೆಲ್ಲ ಆಪದ್ಭಂದುವಾಗಿ ಪರಿಚಿತರು.

ಬೀಳ್ಕೊಡುಗೆ ಸಮಾರಂಭದಲ್ಲಿ ಹಿರಿಯ ಮತ್ತು ಕಿರಿಯ ಮಿತ್ರರನೇಕರು ಭರತಾದ್ರಿ ದಂಪತಿಗಳ ಜತೆ ತಮ್ಮ ಒಡನಾಟದ ಮಧುರ ಕ್ಷಣಗಳನ್ನು ವಿವರಿಸಿದರು. ಶ್ರೀ ಇನ್ನ ರಾಮ್ ಮೋಹನ ರಾವ್ ಮತ್ತು ಶ್ರೀ ಬಿ.ಎಸ್. ಕಲ್ಲೂರ್ ಅವರು ಮಾತನಾಡಿ ಭರತಾದ್ರಿ ದಂಪತಿಗಳ ಕೊಡುಗೆಯನ್ನು ಪ್ರಶಂಶಿಸಿ ತಾಯ್ನಾಡಿನಲ್ಲಿ ಅವರ ವಾಸವು ಶುಭದಾಯಕವಾಗಲೆಂದು ಹಾರೈಸಿದರು.




ಡಾ. ಬಿ.ವಿ. ಅಡ್ಕೋಳಿ ಅವರು ಭರತಾದ್ರಿ ದಂಪತಿಗಳು ಅವರ ನೆರೆಮನೆಯವರಾಗಿ ದೆಹಲಿಗೆ ಬಂದದ್ದು ಹಾಗು ಅವರನ್ನು ಸಂಘ ಹಾಗೂ ಶಾಲೆಗೆ ಪರಿಚಯಿಸಿದ ಬಗೆಯನ್ನು ವಿವರಿಸಿ ಅವರೀರ್ವರ ಕೊಡುಗೆಯನ್ನು ಪ್ರಶಂಸಿಸಿದರು.

ಶ್ರೀ ರಜತಾದ್ರಿ ಭರತಾದ್ರಿಯವರ ಕಾಲೇಜಿನ ಸಹಪಾಠಿ ಹಾಗೂ ಮಿತ್ರ ಡಾ. ಟಿ.ಎಸ್. ಸತ್ಯನಾಥ್ ಅವರು ತಮ್ಮ ಯೌವನದ ಮಧುರ ಕ್ಷಣಗಳನ್ನು ನೆನೆಯುವುದರ ಜೊತೆಗೆ ದೆಹಲಿ ವಾಸದ ಒಡನಾಟ ಕುರಿತು ಆತ್ಮೀಯತೆಯ ಮಾತುಗಳನ್ನಾಡಿದರು.

ಶ್ರೀ ಎಸ್. ಕೃಷ್ಣ ಭಟ್ ಅವರು ಮಾತಾಡುತ್ತಾ ತಾವು ಕಾರ್ಯದರ್ಶಿಯಾಗಿದ್ದಾಗ ಸಂಘದ ಹೊಸ ಕಟ್ಟಡದ ಕಾರ್ಯ ಪ್ರಾರಂಭಿಸ ಬೇಕಾದಾಗ ಎದುರಾಗಿದ್ದ ಹಣದ ಮುಗ್ಗಟ್ಟಿನ ವಿವರ ನೀಡಿ ಆಗ ಸರಕಾರದ ಅನುದಾನ ಸಿಗುವಲ್ಲಿ ರಜತಾದ್ರಿ ಭರತಾದ್ರಿ ಯವರ ಕೊಡುಗೆ ಕುರಿತಾದ ವಿವರವನ್ನು ತಿಳಿಸಿದರು. ಶ್ರೀಮತಿ ಉಷಾ ಭರತಾದ್ರಿಯವರನ್ನು ಸಂಘದ ಪದಾಧಿಕಾರಿಯಾಗಿ ತರುವಲ್ಲಿದ್ದ ತಮ್ಮ ಪಾತ್ರ ಕುರಿತು ಉಲ್ಲೇಖಿಸಿದರು.

ಶ್ರೀ ಚೆನ್ನು ಎಸ್ ಮಠದ್ ಅವರು ಮಾತಾಡುತ್ತಾ ಅಭಿಮತ ಪ್ರಕಟಣೆಯಲ್ಲಿ ಶ್ರೀ ಚೆನ್ನು ಅವರ ಮತ್ತು ಉಷಾ ಅವರ ಸಿಹಿ ಕಹಿ ವಾದ ವಿವಾದ ಕುರಿತು ಹೇಳಿ ರಜತಾದ್ರಿಯವರೊಂದಿಗಿನ ಕೃಷಿ ಮಂತ್ರಾಲಯ ಹಾಗು ದೂರದರ್ಶನದ ಭೇಟಿಯ ಘಟನೆಗಳನ್ನು ನೆನೆದುಕೊಂಡರು. ಶ್ರೀ ಎನ್.ಆರ್. ಶ್ರೀನಾಥ್, ಶ್ರೀ ನರಸಿಂಹಮೂರ್ತಿ ಮೊದಲಾದವರು ಭರತಾದ್ರಿ ದಂಪತಿಗಳನ್ನು ಪ್ರಶಂಶಿಸಿ ಮಾತನಾಡಿದರು. ಅನುಪಸ್ಥಿತ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಕಳಿಸಿದ ಶುಭ ಸಂದೇಶ  ಪತ್ರವನ್ನು ಶ್ರೀ ಟಿ.ಪಿ. ಬೆಳ್ಳಿಯಪ್ಪ ಅವರು ಓದಿದರು.

ತನ್ನ ವ್ಯಕ್ತಿತ್ವ ವಿಕಾಸಕ್ಕೆ ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿಯ ಕನ್ನಡಿಗರು ಮಹತ್ತರವಾದ ಕೊಡುಗೆಯನ್ನು ನೀಡಿದ್ದಾರೆ ಎಂದು ಸ್ಮರಿಸಿದ ಶ್ರೀಮತಿ ಉಷಾ ಭರತಾದ್ರಿಯವರು ಸದಸ್ಯರೆಲ್ಲಾ ಆಡಿದ ಪ್ರಶಂಶೆಯ ಮಾತುಗಳಿಗೆ ಭಾವುಕರಾಗಿ ವಂದನೆಗಳನ್ನು ತಿಳಿಸಿದರು.

ಒಟ್ಟಾರೆ ಹೇಳುವುದಾದರೆ ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿ ಕನ್ನಡ ಶಾಲೆ ಎರಡೂ ದೆಹಲಿಯಲ್ಲಿ ಕನ್ನಡಿಗರು ನೆಟ್ಟ ಮರಗಳು ಎಂದು ಕೊಂಡರೆ ಮರಗಳ ಹೂ ಕಾಯಿ ಹಣ್ಣುಗಳಂತೆ ಜನಮೆಚ್ಚುಗೆ ಪಡೆದವರು ಶ್ರೀಮತಿ ಉಷಾ ಭರತಾದ್ರಿ ಆದರೆ ಯಾರ ಕಣ್ಣಿಗೂ ಬೀಳದೆ ಮರಗಳಿಗೆ ಪೋಷಣೆ ನೀಡಿದ ಬೇರಿನಂತೆ ಇದ್ದವರು ರಜತಾದ್ರಿ ಎಂದು ಹೇಳಬಹುದು.

ಶ್ರೀ ಬಿ.ಎಸ್. ಕಲ್ಲೂರ, ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಮತ್ತು ಶ್ರೀ ಬಿ.ಕೆ. ಬಸವರಾಜು ಅವರು ಭರತಾದ್ರಿ ದಂಪತಿಗಳನ್ನು ಶಾಲು ಹೊದಿಸಿ ಫಲ ಪುಷ್ಪ ಹಾಗೂ ಸಂಘದ ಫಲಕ ನೀಡಿ ಸನ್ಮಾನಿಸಿದರು.

ಕಾರ್ಯಕ್ರಮದ ಪ್ರಾರಂಭದಲ್ಲಿ ಸಂಘದಲ್ಲಿ ಲಭ್ಯವಿದ್ದ ಛಾಯಾಚಿತ್ರಗಳಿಂದ ತಯಾರಿಸಿದ ಶ್ರೀಮತಿ ಉಷಾ ಭರತಾದ್ರಿ ಅವರ  ಕುರಿತಾದ ಚಿತ್ರ ಸರಣಿ ಪ್ರದರ್ಶಿಸಲಾಯಿತು. ಜಂಟಿ ಕಾರ್ಯದರ್ಶಿ ಶ್ರೀಮತಿ ಹೇಮಲತಾ ಗುಡ್ಡೇಗೌಡ ಕಾರ್ಯಕ್ರಮದ ನಿರ್ವಹಣೆ ಮಾಡಿದರು. ಅ

***ಚೆನ್ನು ಎಸ್. ಮಠದ***



# ಸಂಘದ ಅಭಿವೃದ್ಧಿಗೆ ಅಪಾರ ಕೊಡುಗೆ ನೀಡಿದ ಭರತಾದ್ರಿ ದಂಪತಿಗಳು



ಶ್ರೀಮತಿ ಉಷಾ ಭರತಾದ್ರಿಯವರು 2004ರಲ್ಲಿ ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯೆಯಾಗಿ ಆಯ್ಕೆಯಾದಂದಿನಿಂದ ದೆಹಲಿಯಲ್ಲಿ ಕನ್ನಡಪರ ಚಟುವಟಿಕೆಗಳಲ್ಲಿ ಕ್ರಿಯಾಶೀಲರಾಗಿ ತಮ್ಮ ಅಮೂಲ್ಯ ಕೊಡುಗೆಯನ್ನು ನೀಡಿದ್ದಾರೆ. ಶ್ರೀಮತಿ ಭರತಾದ್ರಿಯವರು 2006ರಲ್ಲಿ ಜಂಟಿ ಕಾರ್ಯದರ್ಶಿಯಾಗಿ, 2008 ಮತ್ತು 2011ರಲ್ಲಿ ಸತತವಾಗಿ ಉಪಾಧ್ಯಕ್ಷೆಯಾಗಿ ಸಂಘದ ಕಾರ್ಯಕಾರಿ ಸಮಿತಿಗೆ ಆಯ್ಕೆಗೊಂಡಿದ್ದರು. ಜತೆಗೆ ಅವರು ಸಂಘದ ಮುಖ ಪತ್ರಿಕೆ ಅಭಿಮತದ ಸಂಪಾದಕಿಯಾಗಿ ಪತ್ರಿಕೆಯು ಉತ್ತಮ ಗುಣಮಟ್ಟದಲ್ಲಿ ಮತ್ತು ಸಮಯಾನುಸಾರ ಪ್ರಕಟಗೊಳ್ಳುವಲ್ಲಿ ಬಹಳಷ್ಟು ಕೊಡುಗೆಯನ್ನು ನೀಡಿದ್ದಾರೆ.

ಡಾ. ಪುರುಷೋತ್ತಮ ಬಿಳಿಮಲೆ, ಶ್ರೀ ಸಿ.ವಿ. ಗೋಪಿನಾಥ್ ಮತ್ತು ಡಾ. ವೆಂಕಟಾಚಲ ಹೆಗಡೆ ಅವರ ಅಧ್ಯಕ್ಷತೆಯಲ್ಲಿ ಸಂಘದ ಹೊಸ ಸಾಂಸ್ಕೃತಿಕ ಸಮುಚ್ಚಯದ ನಿರ್ಮಾಣ ಕಾರ್ಯ ಮತ್ತು ಕರ್ನಾಟಕದ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ದೆಹಲಿಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ಜತೆಗೆ ಅಭಿಮತದ 12 ವಿಶೇಷ ಸಂಚಿಕೆಗಳ ಪ್ರಕಟಣೆಯಲ್ಲಿ ತಮ್ಮ ಅತ್ಯಮೂಲ್ಯ ಸಮಯ, ಪ್ರತಿಭೆ ಮತ್ತು ಪರಿಶ್ರಮವನ್ನು ಶ್ರೀಮತಿ ಭರತಾದ್ರಿಯವರು ನೀಡಿದ್ದಾರೆ. ಇದೇ ಸಂದರ್ಭದಲ್ಲಿ ಸಂಘದಲ್ಲಿ ಸುಗಮವಾದ ಆಡಳಿತ ನಡೆಸುವಲ್ಲಿ ಕಾರ್ಯದರ್ಶಿಗಳಾಗಿ ಕಾರ್ಯ ನಿರ್ವಹಿಸಿದ ಶ್ರೀ ಎಸ್. ಕೃಷ್ಣ ಭಟ್, ಶ್ರೀ ಆರ್. ರೇಣು ಕುಮಾರ್ ಮತ್ತು ಶ್ರೀ ಸಿ.ಎಂ. ನಾಗರಾಜ್ ಅವರ ಜತೆ ಹೆಗಲಿಗೆ ಹೆಗಲು ಕೊಟ್ಟು ಶ್ರಮಿಸಿದ್ದಾರೆ. ಸಮಾಜ ಸೇವಕರು, ಹಿರಿಯ ಬರಹಗಾರರು, ಚಿಂತಕರು, ಖ್ಯಾತ ಸಿನಿಮಾ ತಾರೆಯರು ದೆಹಲಿ ಕರ್ನಾಟಕ ಸಂಘದ ಜತೆಗೂಡುವಂತೆ ಶ್ರೀಮತಿ ಉಷಾ ಭರತಾದ್ರಿಯವರು ಸಹಕರಿಸಿದ್ದಾರೆ.

ತಮ್ಮ ಸ್ನೇಹಪರತೆ, ಚುರುಕುತನ, ಕಠಿಣ ಪರಿಶ್ರಮ, ದಿಟ್ಟತನ ಹಾಗೂ ಪ್ರತಿಭೆಗಳಿಂದ ಶ್ರೀಮತಿ ಭರತಾದ್ರಿಯವರು ದೆಹಲಿಯಲ್ಲಿರುವಾಗ ದೆಹಲಿ ಮಾತ್ರವಲ್ಲ ಕರ್ನಾಟಕ ಹಾಗೂ ಹೊರನಾಡಿನಲ್ಲಿ ಕನ್ನಡದ ಕೆಲಸಗಳನ್ನು ಸದಾ ಮುಂದೆ ನಿಂತು ಮಾಡುತ್ತಿದ್ದರು. ಸದಾ ನಗು ಮುಖದ ಅವರು ಎಲ್ಲರೊಡನೆಯೂ ಬೆರೆಯುತ್ತಿದ್ದರಲ್ಲದೇ ಎಲ್ಲರ ಕಷ್ಟ ಸುಖಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಸಂಘದ ಸಾಂಸ್ಕೃತಿಕ, ಸಾಹಿತ್ಯಿಕ, ಕ್ರೀಡಾ, ರಂಗಭೂಮಿ ಚಟುವಟಿಕೆಗಳಲ್ಲಿ ಮಾತ್ರವಲ್ಲದೇ ಸಂಘದ ಆಡಳಿತ ವ್ಯವಸ್ಥೆ ಮತ್ತು ವಿವಿಧ ಸಂಕೀರ್ಣ ಕಾರ್ಯಕ್ರಮಗಳ ಸಂಯೋಜನೆ ಮತ್ತು ನಿರ್ವಹಣೆಗಳಲ್ಲಿ ಶ್ರೀಮತಿ ಉಷಾ ಭರತಾದ್ರಿಯವರು ತಮ್ಮ ಅಪೂರ್ವ ಛಾಪನ್ನು ಬಿಟ್ಟಿದ್ದಾರೆ.

ಮಾಧ್ಯಮ ವಲಯದಲ್ಲಿ ಪ್ರಭಾವಶಾಲಿಯಾಗಿರುವ ಶ್ರೀ ರಜತಾದ್ರಿ ಭರತಾದ್ರಿಯವರು ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿ ಕನ್ನಡ ಶಾಲೆಗಳ ಅಭಿವೃದ್ಧಿಗೆ ಅಮೋಘವಾದ ಕೊಡುಗೆಯನ್ನು ನೀಡಿದ್ದಾರೆ. ಕರ್ನಾಟಕ ಸರಕಾರದ ಮೇಲೆ ತಮ್ಮ ಪ್ರಭಾವ ಬೀರಿ ಸಂಘದ ವಿವಿಧ ಅಭಿವೃದ್ಧಿ ಕೆಲಸಗಳಿಗೆ ಬೇಕಾದ ಧನ ಸಹಾಯ, ಸಂಘದ ನಿಯಮಾವಳಿಗಳ ತಿದ್ದುಪಡಿ ಮತ್ತು ಸಂಘದಲ್ಲಿ ಯಾವಾಗಲೂ ಸುಭದ್ರ ಆಡಳಿತ ಮಂಡಳಿ ಬರುವಂತೆ ಮಾಡುವಲ್ಲಿ ಶ್ರೀ ಭರತಾದ್ರಿಯವರು ಬಹಳಷ್ಟು ಶ್ರಮವಹಿಸಿದ್ದಾರೆ. ಅ

***ಬಾಲಕೃಷ್ಣ ನಾಯ್ಕ್ ಡಿ.***

# ವೆಂಕಪ್ಪ ಶೆಟ್ಟಿ ದಂಪತಿಗಳಿಗೆ ಬೀಳ್ಕೊಡುಗೆ

ದೆಹಲಿಯಲ್ಲಿ ಹಲವು ವರ್ಷಗಳಿಂದ ಕನ್ನಡ ಮತ್ತು ತುಳು ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದ ಶ್ರೀ ವೆಂಕಪ್ಪ ಶೆಟ್ಟಿ ದಂಪತಿಗಳು ದೆಹಲಿಯಿಂದ ವರ್ಗಾವಣೆಗೊಂಡು ತೆರಳುವ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘವು ಆತ್ಮೀಯವಾಗಿ ಅಭಿನಂದಿಸಿತು.

ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ದೆಹಲಿ ತುಳು ಸಿರಿಯ ಕಾರ್ಯದರ್ಶಿ ಶ್ರೀ ಅಲೋಕ್ ರೈ ಮೊದಲಾದವರು ಶುಭ ಹಾರೈಸಿದರು. ಅ





# ಅಂತಿಮ ಸಂಸ್ಕಾರ

(ಕಲೈ ಮಗಳ್ ತಮಿಳು ಮಾಸಿಕದ ಫೆಬ್ರವರಿ 2014ರ ಸಂಚಿಕೆಯಲ್ಲಿ ಪ್ರಕಟಿಸಲ್ಪಟ್ಟ 'ಶಾಂತಿ ನಿಲವ ವೇಂಡುಂ' ಎಂಬ ತಮಿಳು ಕಿರುಗಾಥೆಯ ಕನ್ನಡ ಅನುವಾದ)

ತಮಿಳು ಮೂಲ : ರಾಯ ಚೆಲ್ಲಪ್ಪ, ಕನ್ನಡಕ್ಕೆ : ಸು. ಶ್ರೀನಿವಾಸ

ಮುಂಜಾವಿನ ಮಂಜು ಕವಿದ ಕತ್ತಲು, ತೇಲಿ ಬರುವ ಕಾರ್ಮುಗಿಲು ಸೆಣೆಸಾಡುವ ಕತ್ತಲಿನಲ್ಲಿ ಹೆಜ್ಜೆಯ ಮೇಲೆ ಹೆಜ್ಜೆಯನ್ನಿಟ್ಟು ಮಲೆನಾಡಿನ ಬೆಟ್ಟದ ಹಾದಿಯಲ್ಲಿ ದಾರಿ ಸಾಗುತ್ತಿದ್ದರು ನಾರಾಯಣ ಶಾಸ್ತಗಳು. ಸದ್ಯ ಮಳೆ ಬರಲಿಲ್ಲ. ಮಳೆ ಬಂದಿದ್ದರೆ ಮೊದಲನೆಯ ಬಸ್ಸು ತಪ್ಪುತ್ತಿತ್ತು. ಧನುರ್ಮಾಸ ಮುಗಿದು ಕೆಲವೇ ದಿನಗಳಾಗಿದ್ದರೂ ಶೀತ ಗಾಳಿ ಬೆನ್ನೆಲುಬನ್ನು ತೂರಿ ಜುಮ್ಮೆನ್ನಿಸುತ್ತಿತ್ತು. ಕೆರೆ ಕಟ್ಟೆ ಬಸ್ ಸ್ಟಾಂಡಿಗೆ ಇನ್ನೂ ಎರಡು ಮೈಲಿ ಇದೆ. ಶಾಸ್ತಿಗಳಿಗೆ ಅರುವತ್ತು ವಯಸ್ಸಿನ ಪ್ರಾಯ. ವೇದಾಧ್ಯಯನ ಮಾಡಿದ ವಂಶದ ಪರಂಪರೆ. ವೃತ್ತಿಯಲ್ಲಿ ವೈದಿಕರು. ಅಪ್ಪನ ತೃಪ್ತಿಗಾಗಿ ಕೆಲಕಾಲ ಋಗ್ವೇದವನ್ನು ಕಲಿತರು. ನಂತರ ಯಜುರ್ವೇದ ಮತ್ತು ಸಾಮವೇದಗಳಲ್ಲಿ ಪರಿಣತರಾದರು. ಕಾಶಿ, ಕಾಂಚಿ, ಮೈಸೂರು, ಧರ್ಮಸ್ಥಳ, ಶೃಂಗೇರಿ ಎಂದು ಹಲವಾರು ವಿದ್ವತ್ ಸಭೆಗಳಲ್ಲಿ ಪಾರಿತೋಷಕ ಪುರಸ್ಕಾರಗಳನ್ನು ಪಡೆದರು. ಆದರೂ ಪರಂಪರಾಗತ ವೃತ್ತಿ ಪುರೋಹಿತವನ್ನು ಮಾಡೆನೆಂದು ಹಠ. ಯೌವನದಲ್ಲಿ ಒಂದೆರಡು ಖಾಸಗಿ ಕಂಪೆನಿಗಳಲ್ಲಿ ಉದ್ಯೋಗ ಮಾಡಿದರು. ಪ್ರಾಮಾಣಿಕತೆ, ಸಿಟ್ಟು ಸೆಡವು ಅವರ ಏಳಿಗೆಗೆ ತಡೆಯಾಗಿದ್ದವು. ಸರಾಸರಿ ಜನ ಜೀವನಕ್ಕೆ ಬೇಕಿರುವ ಸುಳುಹುಗಳನ್ನು ಕಲಿತಿರಲಿಲ್ಲ. ದಿಕ್ಕೆಟ್ಟು ಜೀವನದಲ್ಲಿ ವಿರಕ್ತಿ ತಲೆ ಎತ್ತಿರಲು ಅವರನ್ನೂ ಒಂದು ವರ್ಷ ತೀವ್ರ ತರಬೇತಿಗಾಗಿ ಮೈಸೂರಿನ ಪದ್ಮನಾಭ ಅವಧಾನಿಗಳ ಬಳಿ ಗುರುಬಲ ಪ್ರಾಧ್ಯಾಪಕ ಅನಂತ ಪದ್ಮನಾಭ ಅವದಾನಿಗಳ ಬಳಿ ಗುರುಕುಲ ವಾಸಕ್ಕೆ ಸೇರಿಸಿ ಇನ್ನು ನೀನು ಪುರೋಹಿತ್ಯಕ್ಕೆ ಲಾಯಕ್ಕೆಂದು ಪುರೋಹಿತ್ಯ ವೃತ್ತಿಗೆ ಅವರ ದುಡಿದ ಅವರ ಸೋದರ ಮಾವ.

ಮೂವತ್ತು ವರ್ಷಗಳು ಕಳೆದು ಹೋದವು.ಈಗ ಅವರಿಗೆ ಮೂರೊತ್ತಿನ ಕೂಳಿಲ್ಲದಿದ್ದರೂ ಎರಡು ವೇಳೆಯ ಊಟಕ್ಕೆ ಕೊರತೆ ಇಲ್ಲದಂತೆ ಕಾಪಾಡಿದೆ, ವೇದ. ಕೊಪ್ಪ, ಹರಿಹರಪುರ, ಜಯಪುರ, ಕಾರ್ಕಳ, ಕೆರೆಕಟ್ಟೆಯಲ್ಲಿರುವ ನೂರಾರು ಗೃಹಸ್ತರಿಗೆ ಇವರೇ ಪುರೋಹಿತರು. ಆದರಂಚೊ ಆಯಕ್ಕಿಂತ ವ್ಯಯ ಮಿಂಚಿ ನಿಂತಿದೆ. ಆಗಾಗ್ಗೆ ಈಶ್ವರೋ ರಕ್ಷತು ಎನ್ನುತ್ತಾ ಜೀವನ ನಡೆಸಿದ್ದಾರೆ. ಆ ಈಶ್ವರನೇ ಇವರ ಕುಟುಂಬವನ್ನು ಕಾಪಾಡಬೇಕು.

ನಮಸ್ಕಾರ ಸ್ವಾಮಿ, ಬನ್ನಿ ಎಂದು ಸ್ವಾಗತಿಸಿದ ಕಂಡಕ್ಟರ್ ರಾಜು. ವಾರಕ್ಕೊಮ್ಮೆಯಾದರೂ ಈ ಬಸ್ಸಿನಲ್ಲಿ ವೃತ್ತಿಗಾಗಿ ಪಯಣಿಸುತ್ತಿರುವ ಪರಿಚಯ ನಾನೂ ಇದ್ದೀನಿ, ಶಾಸ್ತ್ರಿಗಳೇ, ನಮಸ್ಕಾರ ಎಂದ ಅವರ ದೈನಿಕ ವೃತ್ತಿ ಸಹಾಯಕ ವೆಂಕಟ. ಅವನು ಅವರ ಸಹಾಯಕ ಶಿಷ್ಯನೇ ಆದರೂ ಶಾಸ್ತ್ರಿಗಳು ಅವನನ್ನು ಅಸಿಸ್ಟೆಂಟ್ ಎಂದೇ ಕರೆಯುತ್ತಿದ್ದರು. ನಲವತ್ತರ ಪ್ರಾಯ ಮುಟ್ಟಿದ್ದರೂ ಇನ್ನೂ ಬ್ರಹ್ಮಚಾರಿ.

ಕೊಪ್ಪಕ್ಕೆ ಎರಡು ಟಿಕ್ಕೆಟ್ಟು ಕೊಡಿ ಎಂದ ವೆಂಕಟ, ಅವರಿಗೂ ಸೇರಿಸಿ. ಕೊಪ್ಪದ ಧನವಂತರ್ ಮನೆಯಲ್ಲಿ ನಾಡಿದ್ದು ಒಂದು ಮದುವೆ. ಸ್ವಯಂ ಸಂಪಾದನೆ. ಮಕರ ಮಾಸದ ಪ್ರಥಮ ಮುಹೂರ್ತ. ಸಾಹುಕಾರರ ಮನೆ ಮದುವೆ. ಅವರು ಕೊಡುವ ಸಂಭಾವನೆಯಲ್ಲಿ ಕಸ್ತೂರಿಗೆ ಬಟ್ಟೆ ತೆಗೆಯಬೇಕು. ಇನ್ನೇನು ಕೆಲವೇ ದಿನಗಳಲ್ಲಿ 2ನೇ ಪಿ.ಯು.ಸಿ.ರಿಸಲ್ಟ್ ಬಂದು ಬಿಡುತ್ತದೆ. ಅವಳನ್ನು ಒಳ್ಳೆಯ ಕಾಲೇಜಿನಲ್ಲಿ ಸೇರಿಸಿ ಓದಿಸಬೇಕು.

ದನುರ್ಮಾಸದಲ್ಲಿ ಯಾರೂ ಶುಭ ಕಾರ್ಯಗಳನ್ನು ಮಾಡುವುದಿಲ್ಲ. ಶೂನ್ಯ ಮಾಸ. ಪುರೋಹಿತರುಗಳಿಗೆ ವರಮಾನವಿಲ್ಲದ ಪೀಡೆ ಮಾಸ. ಕೈಯಲ್ಲಿದ್ದ ಹತ್ತು ರೂಪಾಯಿಯೂ ಖರ್ಚಾಗಿದೆ.

ವೆಂಕಟ ಶಾಸ್ತ್ರಿಗಳ ಪಕ್ಕದಲ್ಲಿ ಬಂದು ಕುಳಿತ. ಅವರ ಮುಖವನ್ನು ನೋಡಿ. ಅವರ ಮನದ ಹೋರಾಟವನ್ನು ಅರಿತವನಂತೆ. “ಚಿಂತಿಸಬೇಡಿ ಶಾಸ್ತ್ರಿಗಳೇ ನಾಳೆ ವರಮಾನ ಬಲವಾಗಿರುತ್ತೆ. ಸಾಹುಕಾರರ ಮನೆಯಲ್ಲವೇ? ಕಸ್ತೂರಿಯನ್ನು ಒಳ್ಳೆಯ ಕಾಲೇಜಿನಲ್ಲಿ ಸೇರಿಸುವಿರಂತೆ” ಎಂದ.

ನಿನ್ನ ಬಾಯಿಗೆ ಸಕ್ಕರೆ, ನಿನ್ನ ಮಾತು ಫಲಿಸಲಿ. ಆದರೆ, ಪುರೋಹಿತಕ್ಕೆ ಇಷ್ಟುಕೊಡಿ, ಅಷ್ಟು ಕೊಡಿ ಅಂತ ಕೇಳಲು ಮನಸ್ಸು ಬರೋಲ್ಲ ಕಣೊ ಎಂದರು ಶಾಸ್ತ್ರಿಗಳು.

ಕಲೀಬೇಕು ಶಾಸ್ತ್ರಿಗಳೇ. ಸೂಜಿ ಚುಚ್ಚಿದರೆ ಇಷ್ಟು.ಬರೀ ಔಷಧಿಗೆ, ಆಪರೇಷನ್ ಮಾಡಿದರೆ ಒಂದು ರೇಟು ಅಂತ ಡಾಕ್ಟರು ಕೇಳಿ ತಕೋತಾರಲ್ಲಾ. ಅಷ್ಟ್ಯಾಕೆ, ಸಲೂನಿಗೆ ಹೋದರೆ ರೇಟ್ ಲಿಸ್ಟ್ ಎಲ್ಲರಿಗೂ ಕಾಣುವಂತೆ ನೇತಾಕೊರೊದಿಲ್ವೆ? ನಾವು ಸಹ ಹಾಗೆ ವೃತ್ತಿ ಮಾಡಬೇಕು. ಇದರಲ್ಲಿ ಸಂಕೋಚ ಏಕೆ? ನೀವೂ ಸಹ ಹತ್ತು ವರ್ಷ ಅಧ್ಯಯನ ಮಾಡಿ ತಆನೇ ವೃತ್ತಿಗೆ ಬಂದಿದ್ದೀರ ಎಂದು ವೆಂಕಟ.

ಶಾಸ್ತ್ರಿಗಳ ಮುಖ ಸಿಂಡರಿಸಿತು.ನೀನು ಒಳ್ಳೆಯದನ್ನೇ ಹೇಳುತ್ತಿದ್ದೀಯ. ಆದರೆ ವೇದವೆಂಬುದು ಬರೇ ವಾರ್ತೆಗಳಲ್ಲ. ಅದು ಓಂಕಾರ ಶಬ್ಧ. ಪ್ರಪಂಚ ಸೃಷ್ಟಿಗೆ ಮುಂಚೆಯೇ ಇದ್ದ ಶಬ್ಧ. ಅದಕ್ಕೆ ಬೆಲೆ ಕಟ್ಟುವುದು ಸರಿಯೇ? ಅಂತ ಯೋಚಿಸು. ನೋಡು, ನನ್ನ ಅಪ್ಪ, ತಾತ; ತಾತನ ಅಪ್ಪ ಯಾರೂ ಮಾಡದ ಕೆಲಸವನ್ನು ನಾನು ಮಾಡಬಹುದೇ? ನನಗೇಕೋ ಸರಿ ಅನ್ನಿಸಲಿಲ್ಲ. ಅವರು ತಾನಾಗಿ ಏನು ಕೊಡುತ್ತಾರೋ ಅದನ್ನು ಸಂತೋಷವಾಗಿ, ಸ್ವೀಕರಿಸುವುದನ್ನು ಬಿಟ್ಟು ಈ ಕೆಲಸಕ್ಕೆ ಈ ರೇಟು ಅಂತ ಬೆಲೆ ಕಟ್ಟಲಾರೆ.ಇದು ನಿನ್ನಾಣೆ ಸತ್ಯ. ನೀ ಬೇರೆ ನನ್ನ ಮನಸ್ಸನ್ನು ಕೆಡಿಸಲು ಪ್ರಯತ್ನಿಸಬೇಡ ಎಂದು ಖಚಿತವಾಗಿ ಹೇಳಿ ಕಿಟಕಿಯಿಂದ ಹೊರಗೆ ನೋಡ ಹೋದರು ಶಾಸ್ತ್ರಿಗಳು.

ಅವರ ಕಣ್ಣ ಮುಂದೆ ಕಸ್ತೂರಿಯ ದೀನ ಮುಖ ಮತ್ತೆ ಮತ್ತೆ ಕಂಡು ಮರೆಯುತ್ತಿತ್ತು. ಬಹಳ ಒಳ್ಳೆಯ ಹುಡುಗಿ. ಇಂತಹ ಹುಡುಗಿಯನ್ನು ಕಾಣಲರಿದು ಅವರಳ ವಯಸ್ಸಿನ ಹುಡುಗಿಯರಿಗೆ ಸಾಧಾರಣವಾಗಿ ಮೂಡಿ ಬರುವ ಆಶೆ ಯಾವುದನ್ನೂ ಪ್ರಕಟಿಸಿದವಳಲ್ಲ. ಕುಟುಂಬದ ನೆಲೆಯರಿತು ತನ್ನ ಆಶೆಗಳಿಗೆ ತಡೆ ಹಾಕಿದ್ದಳು. ಶಾಲೆಯ ಯುನಿಫಾರ್ಮ್ ಬಿಟ್ಟು ಅವಳಲ್ಲಿದ್ದದು ಎರಡೇ ಜೋಡಿ ತೊಡುಗೆಗಳು. ಅದಕ್ಕಾಗಿ ಅವಳೆಂದೂ ಕೋಪ ಪ್ರದರ್ಶಿಸಲಿಲ್ಲ. ಬಹಳ ಬುದ್ಧಿವಂತ ಹುಡುಗಿ. ಎಂಭತ್ತಕ್ಕೆ ಕಡಿಮೆ ಯಾವ ಪರೀಕ್ಷೆಯಲ್ಲೂ ಪಡೆಯುತ್ತಿರಲಿಲ್ಲ. ಮನೆಯ ಕೆಲಸದಲ್ಲೂ ಗಟ್ಟಿ, ಅಮ್ಮನಿಗೆ ಎಲ್ಲ ಕೆಲಸದಲ್ಲೂ ಸಹಾಯಕ್ಕೆ ನಿಲ್ಲುವಳು.

ಈ ಸಲ ಮಾತ್ರ ಬಾಯಿ ಕೇಳಿದ್ದಳು.ಕಾಲೇಜಿಗೆ ಒಳ್ಳೆಯ ಡ್ರೆಸ್ಸು ಬೇಕೆಂದು. ಖಂಡಿತವಾಗಿ ಮೂರು ಜೋಡಿಯಾದರೂ ಕೊಳ್ಳಬೇಕು. ಇಲ್ಲದಿದ್ದರೆ ಕಷ್ಟ ಎಂದು ಅಮ್ಮನ ಬೆನ್ನ ಹಿಂದೆ ನಿಂತು ಹೇಳಿದ್ದಳು.ಮೊದಲನೆಯ ಸೆಮಿಸ್ಟರಿಗೆ ಫೀಸ್ ತಯಾರು ಮಾಡಿ ಉಳಿದವಕ್ಕೆ ಕಂಪ್ಯೂಟರಿನಲ್ಲಿ ಟ್ಯೂಶನ್ ಹೇಳಿಕೊಟ್ಟು ಸರಿಪಡಿಸಿಕೊಳ್ಳುತ್ತೇನೆಂದು ಧೈರ್ಯವಾಗಿ ನುಡಿದಿದ್ದಳು. ಅವಳು ಕಂಪ್ಯೂಟರಿನಲ್ಲಿ ಹುಷಾರೆಂದು ಶಾಲೆಯಲ್ಲಿ ಎಲ್ಲರೂ ಹೇಳುತ್ತಿದ್ದರು. ಡ್ರಾಯಿಂಗ್ ಚೆನ್ನಾಗಿ ಬರೆಯುವುದರಿಂದ ಕಂಪ್ಯೂಟರ್ ಗ್ರಾಫಿಕ್ಸ್‌ನಲ್ಲಿ



ಪ್ರಖ್ಯಾತಳಾಗುವಳೆಂಬುದು ಅಧ್ಯಾಪಕರುಗಳ ಅಭಿಪ್ರಾಯ.

ಹೆಂಡತಿಯ ಮುಖ ಕಣ್ಣ ಮುಂದೆ ನಿಂತಿತು. ತನ್ನ ಕರ್ತವ್ಯ ಮಾಡುವುದನ್ನು ಬಿಟ್ಟು ಬೇರೇನನ್ನೂ ಅರಿಯದ ಉತ್ತಮಿಯವಳು. ಕಿವಿಯಲ್ಲಿ ಗಲ್ಲದಲ್ಲಿ ಒಂದು ಗುಲಗಂಜಿಯಷ್ಟೂ ಚಿನ್ನವಿಲ್ಲದ ನೆಲೆಯಲ್ಲಿ ಮನೆಬಿಟ್ಟು ಹೋಗುವುದೇ ಅಪೂರ್ವ. ಯಾರೊಂದಿಗೂ ಬಿಟ್ಟಿ ಮಾತನಾಡುವುದೋ ಅಥವಾ ಹೀಯಾಳಿಸಿ ಮಾತನಾಡುವುದನ್ನು ಕಲಿತಿರಲಿಲ್ಲ.

ಎಲ್ಲ ಭಗವಂತನ ದಯೆ. ಹಿರಿಯರ ಆಶೀರ್ವಾದ ಎಂದು ಮನದಲ್ಲಿ ನೆನೆದರು ಶಾಸ್ತ್ರಿಗಳು. ಈ ತಿಂಗಳು ನಾಲ್ಕೈದು ಮದುವೆ ಕೆಲಸ ಕುದುರಿದರೆ ಸಾಕು. ಒಂದಷ್ಟು ಖರ್ಚು ಸರಿಪಡಿಸಬಹುದು. ಆದರೆ ಈಗ ಕೈ ವಶದಲ್ಲಿರುವುದು ಒಂದೇ ಒಂದು ಮದುವೆ ಮಾತ್ರ. ಒಳ್ಳೆಯ ಜನ. ಸಾಹುಕಾರರು. ಏನಿಲ್ಲಾಂದರೂ ಇಷ್ಟಾದರೂ ಕೊಟ್ಟೇ ಕೊಡುತ್ತಾರೆಂದು ಮನದಲ್ಲೇ ಲೆಕ್ಕ ಹಾಕಿದರು. ಛೇ! ಇದೀಗ ಅವರು ಏನು ಕೊಟ್ಟರೂ ಸಂತೋಷ ಎಂದೆನಲ್ಲಾ! ಮನಸ್ಸು ಒಂದು ಮರ್ಕಟ. ಅದರ ವಶವಾಗಬಾರದು. ಎಚ್ಚರಿಕೆವಹಿಸಬೇಕು. ಆದರೂ ಮತ್ತೆ ಮತ್ತೆ ಕಸ್ತೂರಿಯ ಕಾಲೇಜಿನ ವೆಚ್ಚದ ಗೊಂದಲದಲ್ಲಿ ನಿರತವಾಗಿತ್ತು. ತೀರದ ಹಳೆಯ ಸಾಲದ ಬಾಕಿ, ಇಣುಕಿನೋಡಿ ನಮ್ಮನ್ನು ಮರೆಯಬೇಡಿ ಎಂದಿತ್ತು. ಬಹುಶಃ ವೆಂಕಟ ಹೇಳುವುದು ಸರಿ ಅನ್ನಿಸುತ್ತೆ. ಕಾರ್ಯಕ್ಕೆ ತಕ್ಕಂತೆ ರೇಟ್ ನಿರ್ಣಯಿಸಿ ಮಾತನಾಡುವುದೇ ಕಲಿ ಧರ್ಮವೇನೋ?

ಏನು ಶಾಸ್ತ್ರಿಗಳೇ? ಮನಸ್ಸು ಹೋರಾಡುತ್ತಿದೆಯೋ? ಎಂದ ವೆಂಕಟ ತಮಾಷೆಯಾಗಿ. ಎಲ್ಲವೂ ನಿಮ್ಮ ಇಚ್ಛೆಯಂತೆ ನಡೆಯುತ್ತದೆ. ಸ್ವಲ್ಪ ತಾಳ್ಮೆ ವಹಿಸಿ. ಒಂದು ಸಲಹೆ ಇದೆ. ಕೇಳುತ್ತೀರಾ? ಎಂದ.

ಏನದು? ಎಂದು ನೋಡಿದರು ಶಾಸ್ತ್ರಿಗಳು. ಮದುವೆ ನಾಡಿದ್ದು ತಾನೆ? ಇಂದೇ ಹೋಗಿ ಮಾಡುವುದಾದರೂ ಏನಿದೆ? ಆದ್ದರಿಂದ ಶೃಂಗೇರಿಗೆ ಹೋಗಿ ಪೂಜ್ಯ ಶ್ರೀಯವರನ್ನು ದರ್ಶನ ಮಾಡಿ ಬೆಳಿಗ್ಗೆ ಹೋಗುವ. ಅವರ ಆಶೀರ್ವಾದ ಪಡೆದು ಸಮಸ್ಯೆಗೆ ಪರಿಹಾರ ಹುಡುಕೋಣ ಎಂದ ವೆಂಕಟ.

ಶಾಸ್ತ್ರಿಗಳಿಗೆ ಮೈಯೆಲ್ಲಾ ನವಿರೇಳಿದಂತೆ ಆಯಿತು. ಒಳ್ಳೆಯ ಸಲಹೆ.ಪೂಜ್ಯರ ದರ್ಶನ ಮಾಡಿ ಬಹಳ ದಿನವಾಯಿತಲ್ಲಾ ಅಂತ ನಿನ್ನೆ ಕೂಡ ನೆನೆದಿದ್ದೆ. ಸರಿ ಬಾ. ಶೃಂಗೇರಿಯಲ್ಲಿ ಇಳಿದು ಪೂಜ್ಯರ ದರ್ಶನ ಮಾಡಿ ನಾಳೆ ಬೆಳಿಗ್ಗೆ ಎದ್ದು ಕೊಪ್ಪಕ್ಕೆ ಹೋಗುವ. ಪೂಜ್ಯರ ದರ್ಶನ ಮನಸ್ಸಿಗೆ ನೆಮ್ಮದಿ ತರುತ್ತದೆ ಎಂದು ಅವನ ಬೆನ್ನು ತಟ್ಟಿ ಪ್ರಶಂಶಿಸಿದರು. ಶೃಂಗೇರಿಯ ಶಂಕರಮಠದ ಪೀಠಾಧೀಶರಾದ ಶ್ರೀ ಭಾರತೀ ತೀರ್ಥರ ದರ್ಶನ ತಮ್ಮ ಮನಸ್ಸನ್ನು ತಿಳಿವಾಗಿಸುವುದೆಂದು ಅವರು ನಂಬಿದ್ದರು.

ವೆಂಕಟನೂ ಶಾಸ್ತ್ರಿಗಳೂ ಮಠವನ್ನು ತಲುಪಿದಾಗ ದರ್ಶನಾರ್ಥಿಗಳ ಸಂಖ್ಯೆ ಕಡಿಮೆಯಾಗಿತ್ತು. ಗಲಭೆ ತಣಿದಿತ್ತು. ವೃದ್ಧಾಶ್ರಮದಲ್ಲಿ ಏಳೆಂಟು ವೃದ್ಧ ಮಹಿಳೆಯರು ಅಡ್ಡಾಡುತ್ತಿದ್ದರು. ಕೆಲವು ಸ್ತ್ರೀಯರು ಗುಂಪಾಗಿ ಕುಳಿತು ಮಧ್ಯಾಹ್ನದ ಅಡುಗೆಗೆ ತರಕಾರಿ ಆಯುತ್ತಲೂ; ಇನ್ನೂ ಕೆಲವು ಅಡುಗೆ ಮನೆಗೆ ಮಡಿನೀರನ್ನು ಸಾಗಿಸುವುದರಲ್ಲಿಯೂ ನಿರತರಾಗಿದ್ದರು. ಒಬ್ಬ ಮಧ್ಯ ವಯಸ್ಕನು ಚಿಂತಿತನಾಗಿ ಕೋಣೆಯ ಉದ್ದ ಅಗಲಗಳನ್ನು ಅಳೆಯುವಂತೆ ಅಡ್ಡಾಡುತ್ತಿದ್ದನು. ಅವರನ್ನು ನೋಡಿ, ಒಬ್ಬ ವೃದ್ಧ ಮಹಿಳೆ ಕೇಳಿದರು. ಏನಪ್ಪಾ, ಪ್ರಭಾಕರ, ಡಾಕ್ಟರು ಏನೆಂದರು? ಉಳಕೋತಾರೆ ತಾನೆ? ಎಂದು ಸನಿಹಕ್ಕೆ ಹೋಗಿ ಕೇಳಿದರು.

ಪ್ರಭಾಕರ ಆಶ್ರಮದ ಮ್ಯಾನೇಜರ್, ಇಲ್ಲ ಅಜ್ಜಿ, ಡಾಕ್ಟರು ನಂಬಿಕೆ ಇಲ್ಲ ಅಂದರು. ರಾತ್ರಿ ದಾಟುವುದೇ ಕಷ್ಟ ಅಂದರು. ಈ ಸಂಭಾಷಣೆಯ ಮಧ್ಯದಲ್ಲಿ ವೆಂಕಟ ಮತ್ತು ಶಾಸ್ತ್ರಿಗಳು ಅವರ ಕಣ್ಣಿಗೆ ಬಿದ್ದರು.

ಬನ್ನಿ ಬನ್ನಿ, ಪೂಜ್ಯರ ದರ್ಶನಕ್ಕೆ ಬಂದಂತೆ ಕಾಣುತ್ತದೆ. ಕುಳಿತು ಸ್ವಲ್ಪ ನೀರು ಕುಡಿದು ದಾಹ ಶಾಂತಿ ಮಾಡಿಕೊಳ್ಳಿ. ಒಂದು ಅರ್ಜೆಂಟ್ ಪ್ರಮೇಯ ಪೂಜ್ಯರು ಕಾರ್ಕಳಕ್ಕೆ ಹೋಗಿದ್ದಾರೆ. ಪೂಜ್ಯರ ದರ್ಶನಕ್ಕೆ ಬಹಳ ದೂರದಿಂದ ಬಂದ ಹಾಗಿದೆ ಎಂದ ಪ್ರಭಾಕರ ಮುಗುಳು ನಗುತ್ತಾ.

ಶಾಸ್ತ್ರಿಗಳು ಭವ್ಯವಾಗಿ ವಿಷಯವೇನೂ ಇಲ್ಲ ಪೂಜ್ಯರ ದರ್ಶನದಿಂದ ಮನಸ್ಸು ಶಾಂತಿಯಗುತ್ತೆ ಅಂತ ಬಂದೆ. ಸಂಸಾರ ಸಾಗರವಲ್ಲವೇ? ಮನಸ್ಸು ಅಲೆದಾಡುತ್ತೆ. ಕರೆಕಾಣಿಸಿ ಅಂತ ಬೇಡಲು ಬಂದೆ.ಪ್ರಾಪ್ತವಿಲ್ಲ ಅಂದರು.


ಏನೂ ಚಿಂತಿಸಬೇಡಿ. ಈ ಮಣ್ಣಲ್ಲಿ ಕಾಲಿಟ್ಟರೇ ಸಾಕರು. ಕಷ್ಟ ನಿವಾರಣೆಯಾಗುತ್ತೆ ಅಂತಾರೆ. ಪೂಜ್ಯ ಶ್ರೀಯವರು. ಆದಿ ಶಂಕರರಿಂದ ಸ್ಥಾಪಿಸಲ್ಪಟ್ಟ ಮಠವಲ್ಲವೇ? ಅವರ ಗುರುಗಳ ಬೃಂದಾವಣ ಇರುವ ಸ್ಥಳವಲ್ಲವೇ? ಇಲ್ಲಿ ಒಂದು ರಾತ್ರಿ ತಂಗಿದ್ದು ಬೆಳಗ್ಗೆ ಎದ್ದು ಹೋಗಿ ಎಲ್ಲ ಚಿಂತೆಯೂ ದೂರ ಹೋಗುತ್ತೆ ಎಂದ ಪ್ರಭಾಕರ. ಶಾಸ್ತ್ರಿಗಳ ಜವಾಬಿಗೆ ನಿಲ್ಲದೆ ಮಣಿ ಇವರನ್ನ ಏಳನೇಯ ನಂಬರ್ ಕೋಣೆಯಲ್ಲಿ ತಂಗಲು, ಏನು ಮಾಡಬೇಕೋ ಮಾಡಿ ವಸತಿ ಮಾಡಿಕೊಡು; ಕಾಮಾಕ್ಷಿ ಅಜ್ಜಿಗೆ ಮಡಿ ಊಟಕ್ಕೆ ಇನ್ನಿಬ್ಬರು ಇದ್ದಾರೆ ಅಂತ ಹೇಳಿಬಿಡು ಎಂದು ಹೇಳಿ ಸೈಕಲ್ ಹತ್ತಿ ವೇಗವಾಗಿ ಹೊರಟರು.

ಶಾಸ್ತ್ರಿಗಳಿಗೆ ಇಕ್ಕಟ್ಟಾಯಿತು. ಮಠದ ಮ್ಯಾನೇಜರ್ ಹಗೆಯಲ್ಲಿ ಇಷ್ಟವಿಲ್ಲ. ಬಂದ ಕೆಲಸವೂ ಸಹ ಆಗಲಿಲ್ಲ. ಪೂಜ್ಯರ ದರ್ಶನ ಲಭ್ಯವಿಲ್ಲ. ರಾತ್ರಿ ತಂಗುವುದರಿಂದ ಏನೂ ಲಾಭವಿಲ್ಲ. ಮದುವೆ ಮನೆಗೆ ಹೋಗಿದ್ದರೆ ನಾಲ್ಕು ಜನರನ್ನು ಸಂದಿಸಬಹುದಾಗಿತ್ತು. ವರಮಾನಕ್ಕೆ ಹಾದಿ ಹುಡುಕಬಹುದಾಗಿತ್ತು. ಎಲ್ಲಾ ನಿನ್ನಿಂದ ಅಂತ ವೆಂಕಟನನ್ನು ದುರುಗುಟ್ಟಿ ನೋಡಿದರು. ಅವನೋ ತಲೆತಗ್ಗಿಸಿ, ಏಳನೆಯ ನಂಬರ್ ಕೋಣೆ ಕಡೆ ಹೆಜ್ಜೆಯಿಡಲು ತೊಡಗಿದ.

ರಾತ್ರಿಯೆಲ್ಲಾ ನಿದ್ರೆ ಬಾರದೆ ಹೊರಳಾಡುತ್ತಿದ್ದರು ಶಾಸ್ತ್ರಿಗಳು.ಮಗಳ ಕಾಲೇಜಿನ ವೆಚ್ಚಕ್ಕೆ ಹಣವನ್ನು ಶೇಖರಿಸುವ ಚಿಂತೆ. ಕಸ್ತೂರಿಯ ಕಾಲೇಜಿನ ಖರ್ಚು ಸುಮಾರು ಹತ್ತು ಸಾವಿರವಾಗಬಹುದು. ಬಟ್ಟೆಗೆ ಮೂರು ಸಾವಿರ; ಮನಸ್ಸು ನೆಲೆಗೊಳ್ಳಲಿಲ್ಲ. ರಾತ್ರಿಯ ಶಾಂತ ವಾತಾವರಣವನ್ನು ಸೀಳಿ ಎಂ.ಎಸ್. ಸುಬ್ಬಲಕ್ಷ್ಮಿಯ "ಶಾಂತಿ ನೀಲನ ವೇಂಡುಂ" ಎಂಬ ಹಾಡು ಎಲ್ಲಿಂದಲೋ ಕೇಳುತ್ತಿತ್ತು. ಅದು ಅವರಿಗಾಗಿಯೇ ಆಕಾಶವಾಣಿಯಲ್ಲಿ ಪ್ರಚುರ ಮಾಡಿದಂತಿತ್ತು.

ಬೆಳಗಿನ ಜಾವ ಆಶ್ರಮದಲ್ಲಿ ಕಳೇಬರವಾಗಿತ್ತು. ಅಂಬುಲೆನ್ಸಿನಿಂದ ಅನಾಥ ಶವ ಒಂದನ್ನು ಇಳಿಸಲಾಗಿತ್ತು. ಎರಡು ದಿನಗಳ ಹಿಂದೆ ನಡೆದ ವಿಪತ್ತಿನಲ್ಲಿ ಮೃತರಾದ ವೃದ್ಧರ ಶವ. ಯಾವ ವಿಳಾಸವೂ ಇರಲಿಲ್ಲ. ಜನಿವಾರ ಧರಿಸುವುದನ್ನು ಕಂಡ ಪೋಲಿಸರು ಮಠಕ್ಕೆ ಫೋನು ಮಾಡಿ ತಿಳಿಸಿ, ಅಂತ್ಯ ಸಂಸ್ಕಾರವನ್ನು ವಿಧಿವತ್ತಾಗಿ ನೆರವೇರಿಸಬೇಕೆಂದು ಬೇಡಿ ಅನುಮತಿ ಪತ್ರವನ್ನೂ ಬರೆದು ಕಳುಹಿಸಿದ್ದರು.ಇಂತಹ ಸಂಭವಗಳು ಆಶ್ರಮಕ್ಕೆ ಹೊಸತೇನಲ್ಲ. ಮಾಮೂಲು.

ಒಟ್ಟಾರೆ ಈ ಅನಾಥ ಶವಕ್ಕೆ ಪ್ರಪ್ರಥಮವಾಗಿ ಅಂತಿಮ ಸಂಸ್ಕಾರ ನೆರವೇರಿಸಬೇಕು. ಆಶ್ರಮದಲ್ಲಿ ಪುರೋಹಿತರು ಯಾರು ಇಲ್ಲ. ಬೇರೆ ಪುರೋಹಿತರು ಯಾರೂ ಸಿಗುವಂತಿಲ್ಲ. ಬೇಳೂರು ಶಾಸ್ತ್ರಿಗಳೊಬ್ಬರೆ, ಕೇಳಿದೆ, ಹಾಗೋಲ್ಲ, ಅಂದರು. ಕಾರಣ. ಮಕರಮಾಸದ ಪ್ರಥಮ ಮೂಹೂರ್ತ. ಮದುವೆ ಅವರೂ ನಾಲ್ಕು ಕಾಸು ಸಂಪಾದಿಸಲು ಇದುವೇ ಸಮಯ. ಅಮಂಗಲ ಕಾರ್ಯಕ್ಕೆ ಯಾರು ಬರುತ್ತಾರೆ? ಎಂದು ಮಠದ ಅಧಿಕಾರಿ ಪ್ರಭಾಕರ ಯಾರಿಗೋ ಹೇಳುತ್ತಿದ್ದುದು ನಮ್ಮ ಶಾಸ್ತ್ರಿಗಳ ಕಿವಿಗೆಟ್ಟಿತು.



ಥಟ್ಟನೆ ಎದ್ದರು ಶಾಸ್ತ್ರಿಗಳು. ಅವರಿಗೆ ಪೂಜ್ಯರ ಉಪದೇಶವೆಂದರೆ ವೇದವಾಕ್ಯದಂತೆ. "ಒಂದು ಅನಾಥ ಶವದ ಅಂತ್ಯ ಸಂಸ್ಕಾರ ಮಾಡುವುದು ಒಂದು ನೂರು ಅಶ್ವಮೇಧಯಾಗ ಮಾಡಿದ ಫಲ" ಎಂದು ಪೂಜ್ಯರು ಎಂದೋ ಹೇಳಿದ್ದುದು ನೆನಪಿಗೆ ಬಂತು. ಇಂದು ಅಂತಹ ಒಂದು ಸಂದರ್ಭ ಅವರಿಗಾಗಿಯೇ ಕಾದು ಬಂದಿದೆ. ಇದಕ್ಕಾಗಿಯೇ ಅವರನ್ನು ಇಲ್ಲಿ ಬರಮಾಡಿಕೊಂಡಿದೆ.

ಓಡಿ ಹೋಗಿ ಮಠದ ಮ್ಯಾನೇಜರ್ ಪ್ರಭಾಕರನ ಮುಂದೆ ನಿಂತರು. ಸ್ವಾಮಿ ಚಿಂತೆ ಬಿಡಿ. ಮೂರು ತಲೆಮಾರಿನಿಂದ ಪೂರ್ವಾಪರ ಕ್ರಿಯೆಗಳೆರಡನ್ನೂ ಮಾಡಿಸುವ ಪುರೋಹಿತ ಪರಂಪರೆಗೆ ಸೇರಿದವನು ನಾನು.ಬಾಕಿ ಸರಂಜಾಮು ಮಾಡಿ. ನಾನು ಸ್ನಾನ ಮಾಡಿ ಒದ್ದೆ ಬಟ್ಟೆಯಲ್ಲಿ ಬರುತ್ತೇನೆಂದು ಹೇಳಿ ಸ್ನಾನಕ್ಕೆ ಹೊರಟರು.

ನೀನು ಯಾರೋ? ನಾ ಯೋರೋ? ನಿನ್ನ ಅಂತ್ಯ ಸಂಸ್ಕಾರ ಮಾಡುವ ಭಾಗ್ಯ ನನ್ನ ಪಾಲಿಗೆ ಬಂದಿದೆ. ನಿನ್ನನ್ನು ನನ್ನ ಒಡಹುಟ್ಟಿದ ಸಹೋದರನಾಗಿ ಭಾವಿಸಿ ಕರ್ಮ ಮಾಡುತ್ತೇನೆ. ನಿನ್ನ ಆತ್ಮಕ್ಕೆ ಶಾಂತಿ ಲಭಿಸಲಿ ಎಂದು ಮನದಲ್ಲಿ ನೆನೆದು, ಮಹಾಸ್ವಾಮಿಗಳಾದ ಪರಮಾಚಾರ್ಯರಿಗೆ ನಮಸ್ಕರಿಸಿ, ನನ್ನ ಎಲ್ಲ ಚಿಂತೆಯನ್ನು ನಿಮ್ಮ ಪಾದಕ್ಕೆ ಸಮರ್ಪಿಸಿದ್ದೇನೆ. ನನ್ನ ಮನಸ್ಸಿಗೆ ಶಾಂತಿ ದಯಪಾಲಿಸಿ ಎಂದು ಬೇಡಿದರು.

ಸತ್ತವನು ಬಡವನೋ? ಬಲ್ಲಿದನೋ? ಶ್ರೀಮಂತನೋ? ಮಡದಿ ಮಕ್ಕಳು ಉಳ್ಳವನೋ? ಇಲ್ಲದವನೋ? ಒಳ್ಳೆಯವನೋ? ಕೆಟ್ಟವನೋ? ಕಳ್ಳನೋ? ಸುಳ್ಳನೋ? ಬಹುಶಃ ಕೊಲೆ ಅಥವಾ ಕೊಳ್ಳೆ ಹೊಡೆದು ತಲೆ ಮರೆಯಾಗಿದ್ದಾಗ ವಿಪತ್ತಿಗೆ ಬಲಿಯಾದವನೋ? ಯಾರು ಬಲ್ಲರು? ಯಾರೇ ಇಲರಿ, ಮಂತ್ರೋಕ್ತವಾಗಿ ಇವನ ಅಂತಿಮ ಸಂಸ್ಕಾರ ಮಾಡುತ್ತೇನೆ. ಪರಮಾರ್ಚಾಯರ ಉಕ್ತಿಯಂತೆ ಪ್ರತಿಯೊಬ್ಬರಿಗೂ ಶಾಸ್ತ್ರೋಕ್ತವಾಗಿ ಅಂತಿಮ ಸಂಸ್ಕಾರ ಪಡೆಯುವ ಬಾಧ್ಯತೆಯಿದೆ. ಮಂತ್ರಲೋಪ, ಕ್ರಿಯಾಲೋಪ ಇಲ್ಲದೆ ಹೆಸರು ಕುಲ ತಿಳಿಯದ ಈ ಪಾರ್ಥಿವ ಶರೀರವನ್ನು ಅದರ ಅಂತಿಮ ಪಯಣಕ್ಕೆ ಕಳುಹಿಸಿಕೊಟ್ಟರು ಶಾಸ್ತಿಗಳು. ಕಟ್ಟಿಗೆಯೊಂದಿಗೆ ಕಟ್ಟಿಗೆಯಾಗಿ ಆದೇಹ ಬೇಯುತ್ತಿರಲು ಶಾಸ್ತ್ರಿಗಳ ಮನಃ ಚಂಚಲವೂ ಬೆಂದು ಬೂದಿಯಾಗುತ್ತಿದ್ದದು ಕಂಡಿತು.ಕಾರ್ಯ ಮುಗಿಸಿ ಮತ್ತೆ ಮಿಂದು ತಮ್ಮ ಕೊಠಡಿಗೆ ಬಂದು ವೆಂಕಟ ಈಗ ಮನಸ್ಸು ಹಗುರವಾಗಿದೆ ಎಂದರು.

ವೆಂಕಟನ ಮಾತಿನಲ್ಲಿ ಸುರತ್ತಿರಲಿಲ್ಲ. ಅಳುವಂತಿದ್ದ. ಎಂತಹ ಕೆಲಸ ಮಾಡಿದಿರಿ ಶಾಸ್ತಿಗಳೇ? ಇಂದು ಅಮಂಗಳ ಕಾರ್ಯವನ್ನು ಮಾಡಿ ನಾಳೆ ಮದುವೆ ಕೆಲಸಕ್ಕೆ ಹೋಗಲು ಸಾಧ್ಯವೇ? ಶಾಸ್ತ್ರದ ಅನುಮತಿ ಇದೆಯೇ? ಯೋಚಿಸಬೇಡವೇ ಎಂದ,

ಶಾಸ್ತ್ರಿಗಳ ಕೆನ್ನೆಗೆ ಯಾರೋ ಹೊಡೆದಂತಾಯಿತು. ಎಂತಹ ಕೆಲಸ ಮಾಡಿದೆ? ಮಲೆಯಂತಿರುವ ಮದುವೆ ಮುಹೂರ್ತಕ್ಕೆ ಒಪ್ಪಿರುವಾಗ ಭಾವಾವೇಶದಿಂದ ಈ ಅನಾಥ ಶವಕ್ಕೆ ಅಗ್ನಿ ಕೊಟ್ಟೆನಲ್ಲಾ. ಹನ್ನೆರಡು ದಿನಗಳ ಸೂತಕ ಬಂದಿತಲ್ಲಾ, ನಾಳೆಯ ಮದುವೆಗೆ ಬೇರೆ ಯಾರನ್ನಾದರೂ ಪುರೋಹಿತರಾಗಿ ಕಳುಹಿಸಬೇಕು. ಏನು ಮಾಡಲಿ? ಎಂದು ಮತ್ತೆ ಚಿಂತಿಸಹೋದರು ಶಾಸ್ತಿಗಳು. ವೆಂಕಟಾ ನನ್ನನ್ನು ಕ್ಷಮಿಸು. ನೀನೇ ಯಾವುದಾದರೂ ಒಂದು ಉಪಾಯ ಹೇಳು ಎಂದು ಬೇಡಿದರು. ಹೇಗಾದರೂ ಮಾಡಿ ಬೇಳೂರು ಶಾಸ್ತ್ರಿಗಳ ಕಾಲಿಗೆ ಬಿದ್ದು ಅವರನ್ನು ಕರೆದುಕೊಂಡು ಹೋಗು. ನನಗೆ ಅಸೌಕರ್ಯ ಆದ್ದರಿಂದ ಬೇರೆ ಶಾಸ್ತ್ರಿಗಳಿಗೆ ಏರ್ಪಾಟು ಮಾಡಿದ್ದೇನೆಂದು ಸಾಹುಕಾರರಿಗೆ ಮನದಟ್ಟಾಗುವಂತೆ ಭವ್ಯವಾಗಿ ತಿಳಿಸು. ಅವರು ಏನಾಡಿದರೂ ಉತ್ತರ ಕೊಡಬೇಡ. ನಾನು ಇಲ್ಲಿದ್ದು ನಾಳೆ ಸಂಚಯನ ಮಾಡಿ, ಅಸ್ಥಿಯನು ವಿಸರ್ಜಿಸಿ ಊರಿಗೆ ಹೋಗುತ್ತೇನೆ. ನೀನು ಊರಿಗೆ ಬಾ ಎಂದು ದೀನ ಸ್ವರದಲ್ಲಿ ಹೇಳಿದರು.

ಮಠದ ಅಧಿಕಾರಿ ಪ್ರಭಾಕರನಿಗೆ ಪರಿಪೂರ್ಣ ತೃಪ್ತಿ. ಧನ್ಯವಾದಗಳು ಶಾಸ್ತ್ರಿಗಳೇ! ಇಂದು ನೀವು ಮಾಡಿರುವ ಕಾರ್ಯ ದೊಡ್ಡ ತ್ಯಾಗವೆನ್ನಬಹುದು. ಯಾರೋ ಪರಿಚಯವಿಲ್ಲದ ಅನಾಥ ಶವವನ್ನು ಸ್ವಂತ ಸಹೋದರನಾಗಿ ಭಾವಿಸಿ ಅಂತಿಮ ಸಂಸ್ಕಾರ ಮಾಡಿದ್ದೀರಾ. ವೈದೀಕದಲ್ಲಿ ಕೊರೆ ಇಲ್ಲದಂತೆ ಕಾರ್ಯ ನಿರ್ವಹಿಸಿದ್ದೀರಾ. ಈ ಪುಣ್ಯ ನಾಲ್ಕು ತಲೆಮಾರಿನವರೆಗೂ ನಿಮ್ಮ ವಂಶವನ್ನು ಕಾಪಾಡುತ್ತದೆ, ಇದು ಸತ್ಯವಚನ ಎನ್ನುತ್ತಾ ಅವರ ಕೈಯಲ್ಲಿ ಒಂದು ನೂರು ರೂಪಾಯಿಯನ್ನು ತುರುಕಿದರು. ಕ್ಷಮಿಸಿ. ಇದು ನಿಮ್ಮ ಪಯಣದ ವೆಚ್ಚಕ್ಕೆ. ನಿಮಗೆ ಗೊತ್ತಿದೆಯಲ್ಲಾ.ವೈದೀಕಕ್ಕೆ ಸಂಭಾವನೆ ಕೊಡುವ ಅಭ್ಯಾಸ ಶ್ರೀ ಮಠದಲ್ಲಿಲ್ಲ ಅಂತ ಎಂದರು.

ಮ್ಯಾನೇಜರ್ ಹೋದ ಮೇಲೆ ವೆಂಕಟ ಶಾಸ್ತ್ರಿಗಳ ಪಕ್ಕದಲ್ಲಿ ಬಂದು ನಿಂತ. ಕಸ್ತೂರಿಯ ಬಗ್ಗೆ ಚಿಂತಿಸಿದರೆ ಮನಸ್ಸಿಗೆ ನೋವಾಗುತ್ತದೆ. ಈಗ ಅವಳ ಕಾಲೇಜು ಫೀಸ್‌ಗೆ ಏನು ಮಾಡುತ್ತೀರಿ? ಅವಳ ಮುಖವನ್ನು ಹೇಗೆ ನೋಡುವಿರಿ? ಪಾಪ ! ಹತ್ತು ಸಾವಿರ ವರಮಾನವನ್ನು ಪರಿತ್ಯಜಿಸಿ ಭಾವಾವೇಶದ ಉದ್ವೇಗದಲ್ಲಿ ನೂರು ರೂಪಾಯಿಗೆ ಸಮಾಜ ಸೇವೆ ಮಾಡಿದ್ದೀರಲ್ಲಾ. ಈ ಸಮಾಜ ಕಸ್ತೂರಿಯ ಕಾಲೇಜಿನ ಫೀ ಸಲ್ಲಿಸುತ್ತದೆಯೇ? ಎಂದು ಆತ್ಮಾರ್ಥವಾಗಿ ಅನುತಾಪದ ಧ್ವನಿಯಲ್ಲಿ ಹೇಳಿ ಹೊರಟ. ಶಾಸ್ತ್ರಿಗಳು ಏನೂ ಉತ್ತರ ಕೊಡಲಿಲ್ಲ. ಗೋಡೆಯಲ್ಲಿ ತೂಗುತ್ತಿದ್ದ ಪರಮಾಚಾರ್ಯರ ಪಠವನ್ನು ಕಣ್ತುಂಬ ನೋಡಿದರು. "ಈಶ್ವರೋ ರಕ್ಷತು" ಎಂದು ಎಂದಿನಂತೆ ಹೇಳಿ ಮನಸ್ಸನ್ನು ಹಗುರಪಡಿಸಿಕೊಂಡರು. ಕಸ್ತೂರಿ ಹೇಗೂ ಕಾಲೇಜು ಸೇರಿ ಓದುತ್ತಾಳೆಂದು ಅಶರೀರಿಯಾಗಿ ಮಹಾಸ್ವಾಮಿಗಳು ಆಶ್ವಾಸನೆ ನೀಡುತ್ತಿರುವಂತೆ ಕಂಡಿತು.

ಪ್ರಭಲ ರಾಜಕಾರಿಣಿ ಮಲೆನಾಡಿನ ಮಣ್ಣಿನ ಮಗ, ಗೌಡರ ಐವತ್ತೊಂದು ವಯಸ್ಸಿನ ಮಗನ ಜನ್ಮ ದಿನಾಚರಣೆ, ಗೌಡರಿಗೆ ವಯಸ್ಸಾಯಿತು. ಮಗನನ್ನು ತನ್ನ ಉತ್ತರಾಧಿಕಾರಿಯಾಗಿ ಘೋಷಿಸಿ ತಾವು ಹಿನ್ನೆಲೆಯಲ್ಲಿ ನಿಲ್ಲಲು ತೀರ್ಮಾನಿಸಿದ್ದರು. ಮಗನನ್ನು ರಾಜಕೀಯಕ್ಕೆ ಪರಿಚಯಿಸುವ ಉದ್ದೇಶದಿಂದ ಎಲ್ಲ ಜಬರ್ದಸ್ತು ಏರ್ಪಾಟುಗಳೂ ನಡೆದಿತ್ತು. ರಹಸ್ಯ ಆಣೆ ಎಲ್ಲ ಪುಡಾರಿಗಳಿಗೂ ಕಳುಹಿಸಲಾಗಿತ್ತು. ಗೌಡರು ಆಶಿಸಿದರೆಂದರೆ ಬೇರೆ ಮಾತಿಗೆ ಸ್ಥಾನವಿಲ್ಲ. ಮರಿಗೌಡರಿಗಾಗಿ ಬೀದಿಯೆಲ್ಲಾ ತೋರಣದಿಂದ ಅಲಂಕೃತವಾಗಿತ್ತು. ಪೋಸ್ಟರುಗಳು ಲೇಪಿಸಲಾಗಿತ್ತು. ಅಲ್ಲಲ್ಲಿ ಗುಂಪು ಗುಂಪಾಗಿ ನಿಂತು ಜನರು ತಮ್ಮಲ್ಲಿ ವಿಶ್ಲೇಷಿಸುತ್ತಿದ್ದರು. ಇಷ್ಟೆಲ್ಲಾ ಆದರೂ ಗೌಡರಿಗೆ ತೃಪ್ತಿಯಿಲ್ಲ. ಕಾರ್ಯಕಾರಿ ಸಮಿತಿಯ ಕೂಟಕ್ಕೆ ಕರೆಕೊಟ್ಟರು.

ಸಮಿತಿಯ ಕೂಟದಲ್ಲಿ ಹಲವಾರು ಸಲಹೆಗಳು ಮೂಡಿ ಬಂದುವು. ನಮ್ಮ ಪ್ರತಿ ಪಕ್ಷದವರು ಬೇರೊಂದು ಸಂದರ್ಭದಲ್ಲಿ ಬಡಮಾನವರಿಗೆ ಮಡಿಲು ಗಣಕವನ್ನು ಕೊಟ್ಟರು. ಅದನ್ನೂ ಮೀರುವಂತೆ ನಾನು ಏನಾದರೂ ಮಾಡಬೇಕು ಎಂದು ಸಲಹೆ ನೀಡಿದರು. ಒಬ್ಬರು ಹಾರಿಕೆಯ ಮಾತನ್ನು ಯಾರು ನಂಬುವುದಿಲ್ಲ. ಎಲ್ಲ ಕೋಮಿನವರಿಗೂ ಮಾಡಬೇಕು. ಯಾವ ಜಾತಿಯವರನ್ನೂ ಬಿಡಬಾರದು ಎಂದರು. ಹಿಂಬದಿಯಿಂದ ಇನ್ನೊಬ್ಬರು.

ನಾನು ಹೇಳ್ತೀನಿ, ಪ್ರತಿಯೊಂದು ಕ್ಷೇತ್ರದಲ್ಲಿಯೂ ಕೋಮಿಗೆ ಓರ್ವರಂತೆ ಚೆನ್ನಾಗಿ ಓದುವ ದ್ವಿತೀಯ ಪಿ.ಯು.ಸಿ. ಮುಗಿಸಿರುವ ಐವತ್ತೊಂದು ಬಡ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ಅವರುಗಳ ಮೂರು ವರ್ಷದ ಕಾಲೇಜು ಫೀಸನ್ನು ನಾವೇ ಸಲ್ಲಿಸಿದರೆ ಕನ್ನಡ ನಾಡೇ ನಮ್ಮನ್ನು ಹೊಗಳಿ ಕೊಂಡಾಡುತ್ತದೆ, ಇದು ಸತ್ಯ ಎಂದರು ಮೂರನೆಯವರು.

ಮುಗುಳು ನಕ್ಕ ಗೌಡರು, ಮೂರನೆಯವರ ಬೆನ್ನಮೇಲೆ ಕೈಯಾಡಿಸುತ್ತಾ ಪರವಾಗಿಲ್ಲ ಕಣಯ್ಯ ನಿನಗೂ ಒಳ್ಳೆಯ ಸಲಹೆ ಕೊಡುವ ಯೋಚನೆ ಬರುತ್ತೆ ಎಂದು ಹೇಳಿ ಪ್ರಸನ್ನಚಿತ್ತರಾದರು.ಗೌಡರು ನಕ್ಕರೆಂದರೆ ಸಲಹೆಗೆ ಸ್ವೀಕೃತಿ ದೊರಕಿತೆಂದರ್ಥ. ನಿಜವಾಗಿಯೂ ಬಡವರಾಗಿರಬೇಕು. ಇದರಲ್ಲಿ ಮಾತ್ರ ಯಾವ ತಪ್ಪೂ ಮಾಡದೆ ಕಾರ್ಯನಿರತರಾಗಿ ವಿದ್ಯಾರ್ಥಿಗಳ ಆಯ್ಕೆ ಮಾಡಿ. ನಾಳೆಯೊಳಗೆ ಲಿಸ್ಟ್ ತಯಾರಾಗಲಿ ಎಂದು ಹೇಳಿ ಗೌಡರು ಹೊರಟರು.

ನನ್ನ ಮಗಳ ಜತೆ ಓದುವ ಹುಡುಗಿ ಕಸ್ತೂರಿ ಅಂತ ಹೆಸರು. ದ್ವಿತೀಯ ಪಿ.ಯು.ಸಿ. ಪರೀಕ್ಷೆ ಬರೆದಿದ್ದಾಳೆ. ಕಾಲೇಜಿಗೆ ಹೆಸರು ತರುವಳೆಂದು ಅಧ್ಯಾಪಕರುಗಳ ಅಭಿಪ್ರಾಯ. ಬಹುಶಃ ಸ್ಟೇಟ್ ಫಸ್ಟ್ ಬರುವ ಸಾಧ್ಯತೆ ಇದೆ ಎಂದು ಅಧ್ಯಾಪಕರುಗಳು ಅಭಿಪ್ರಾಯಪಟ್ಟಿರುವರೆಂದು ಹೇಳಿದ್ದಳು ನನ್ನ ಮಗಳು. ತೀರದ ಬಡತನ. ಹಾರುವರ ಹುಡುಗಿ. ಅಪ್ಪ ಶಾಸ್ತ್ರಿಗಳು. ಕಾಲೇಜಿಗೆ ಸೇರಿ ಮುಂದೆ ಓದಬೇಕೆಂಬ ಆಸೆ. ಆ ಹುಡುಗಿಯ ಹೆಸರನ್ನು ಮೊದಲು ಬರೆಯಿರಿ ಎಂದರು. ಕೆರೆಕಟ್ಟೆ ಕ್ಷೇತ್ರದ ಪುಡಾರಿ. ಅ



# "ಮಾತೃ ದೇವೋ ಭವ"

ಒಂಬತ್ತು ತಿಂಗಳು ಹೊತ್ತು ಹೆತ್ತು ಜನ್ಮ ನೀಡುವ ತಾಯಿ ನಿಜಕ್ಕೂ ದೇವರ ಸಮಾನ. ಅವಳಿಗೆ ಅವ್ವಾ, ಅಮ್ಮಾ ಎಂದು ನಾವು ಕರೆಯುವುದೇ ಆನಂದ ಹಾಗೂ ಹಿತಾನುಭವ. ಅವಳೂ ಮಗುವಿಗೆ ತೋರಿಸುವ ಮಮತೆ-ಅಂತಃಕರುಣೆ ಅತ್ಯಂತ ನಿಷ್ಕಲ್ಮಷವಾಗಿ ಹಾಗೂ ಹಿತದಾಯಕವಾಗಿರುತ್ತದೆ. ಅಳುವ ಮಗುವನ್ನು ಅಪ್ಪಿಕೊಂಡು ತನ್ನ ಮಡಿಲಲ್ಲಿ ಹಾಕಿಕೊಂಡು ಅಮೃತದಂತಹ ಎದೆಹಾಲನ್ನು ಉಣಿಸುವಾಗ ಮಗು ಸಂತೋಷದಿಂದ ತೃಪ್ತಿ ಪಡೆದು ನಿದ್ದೆ ಹೋಗುತ್ತದೆ.ಮಕ್ಕಳ ಎಲ್ಲಾ ತಪ್ಪುಗಳನ್ನು ಸಹಿಸಿಕೊಂಡು, ಅವರನ್ನು ಸನ್ಮಾರ್ಗಕ್ಕೆ ತರಲು ಪ್ರಯತ್ನಿಸುತ್ತಾಳೆ.ಅಂತೆಯೇ ಅವಳಿಗೆ "ಕ್ಷಮಯಾ ಧರಿತ್ರಿ"ಎಂದು ಕರೆದಿದ್ದಾರೆ. ತಾಯಿಯೇ ಅವಳಿಗೆ ಪ್ರಥಮ ಗುರು. ಅವಳೇ ಸರ್ವಸ್ವ. ಮಗುವಿಗೆ ಮಾತುಗಳನ್ನು ಕಲಿಸುವವಳು. ನಡೆ-ನುಡಿಗಳನ್ನು ಹೇಳಿಕೊಡುವವಳು. ಅಷ್ಟೇ ಏಕೆ? ಪ್ರತಿಭಾವಂತ ಪ್ರಜೆಗಳನ್ನಾಗಿ ಮಾಡುವದರಲ್ಲಿಯೂ ತಾಯಿಯ ಪಾತ್ರವೇ ಅತೀ ಮುಖ್ಯವಾದುದು.

ನಾನು ಹಾಗೂ ನನ್ನ ಅಣ್ಣ ತಮ್ಮಂದಿರು, ಅಕ್ಕ-ತಂಗಿಯರು ನಮ್ಮ ತಾಯಿಗೆ "ಅವ್ವಾ" ಎಂದು ಕರೆಯುವುದೇ ಪದ್ಧತಿಯಾಗಿದೆ. ಹತ್ತು ಮಕ್ಕಳಿಗೆ ಜನ್ಮ ನೀಡಿದ್ದ ನಮ್ಮವ್ವ ನಮ್ಮೆಲ್ಲರನ್ನು ಸಾಕಿ, ಬೆಳೆಸಿದ್ದು ನಾವು ಯಾರೂ ಮರೆತಿಲ್ಲ. ಆಗಿನ ಕಾಲದಲ್ಲಿ ಕನ್ನಡ ಶಾಲೆಯ ಮಾಸ್ತರರಾಗಿದ್ದ ನಮ್ಮ ತಂದೆಯವರಿಗೆ ಸರ್ಕಾರದಿಂದ ಬರುತ್ತಿದ್ದ ಪಗಾರವನ್ನು ಬಿಟ್ಟರೆ ಬೇರೆ ಯಾವ ರೀತಿಯ ಹಣಕಾಸಿನ ಆದಾಯವಿರಲಿಲ್ಲ. ಅತೀ ಉತ್ತಮ ಶಿಕ್ಷಕರೆಂದು ಹೆಸರುವಾಸಿಯಾಗಿ ಧಾರವಾಡ ಜಿಲ್ಲೆಯ ಹಳ್ಳಿ-ಹಳ್ಳಿಗೂ ಅವರು ಪರಿಚಿತರಾಗಿದ್ದರಿಂದ ಕೆಲ ಹಳ್ಳಿಯ ಹಿರಿಯರು ತಮ್ಮ ಮಕ್ಕಳ ವಿದ್ಯಾಭ್ಯಾಸ ಚೆನ್ನಾಗಿ ಆಗಲೆಂದು ಮಗುವಿನ ಬಟ್ಟೆ-ಬರೆ, ಹಾಸಿಗೆ-ಪುಸ್ತಕಗಳ ಸಹಿತ ನಮ್ಮನೆಗೆ ಬಂದು ನಮ್ಮಪ್ಪನಿಗೊಂದು ಉದ್ದನೆಯಾಗಿ ನಮಸ್ಕಾರ ಮಾಡಿ "ಮಾಸ್ತರೇ, ಈ ನಮ್ಮ ಮಗ ಇಂದಿನಿಂದ ನಿಮ್ಮಗ ಅಂತಾ ತಿಳಿದುಕೊಂಡು ಈತನಿಗೆ ಆಶೀರ್ವಾದ ಮಾಡಿರಿ" ಅಂತ ಹೇಳಿ ನಮ್ಮನೆಯಲ್ಲಿಯೇ ಬಿಟ್ಟು ಹೋಗುತ್ತಿದ್ದರು. ಅಂತಹ ನಾಲ್ಕಾರು ಹುಡುಗರು ನಮ್ಮೊಂದಿಗಿದ್ದಾಗ, ನಮ್ಮವ್ವ ಎಲ್ಲರಿಗೂ ಅಡುಗೆ ಮಾಡಿ ಊಟ ಮಾಡಿಸಬೇಕಾಗುತ್ತಿತ್ತು.ಅವರೆಲ್ಲರೊಂದಿಗೆ ಸಾಲಾಗಿ ಕುಳಿತು ಊಟ ಮಾಡಿದ್ದ ನೆನಪು ಇನ್ನೂ ಮಾಸಿಲ್ಲ. ತನ್ನ ಪಾಲಿನ ತುತ್ತನ್ನು ನಮಗೆ ತಿನ್ನಿಡಿ ದೊಡ್ಡವರನ್ನಾಗಿ ಮಾಡಿದ್ದಾಳೆ.

ಧರ್ಮದಿಂದ ನಡೆಯುವ ದಾಂಪತ್ಯ ಜೀವನದಲ್ಲಿ ತಂದೆಯ ಸ್ಥಾನವೂ ತಾಯಿಯಷ್ಟೇ ಮಹತ್ವದ್ದಾಗಿದೆ. ಭೂಮಿಗಿಂತ ದೊಡ್ಡವಳು ತಾಯಿ ಆದರೆ, ಬಾನಿಗಿಂತ ದೊಡ್ಡವರು ತಂದೆ. ಮಕ್ಕಳ ಜೀವನದಲ್ಲಿ ಇವರಿಬ್ಬರ ಮಾರ್ಗದರ್ಶನ ಅನನ್ಯವಾಗಿರುತ್ತದೆ. ಏನನ್ನಾದರೂ ಮರೆಯಬಹುದು. ಆದರೆ ತಂದೆ ತಾಯಿಯನ್ನು ಮರೆಯಬಾರದು. ಅವರ ಉಪಕಾರ ಅಪರಿಮಿತಬಾದುದು. ನಮ್ಮನ್ನು ಪ್ರೀತಿಸಿದ್ದಾರೆ. ನಮ್ಮ ಸಕಲ ಅವಶ್ಯಕತೆಗಳನ್ನು ಪೂರೈಸಿದ್ದಾರೆ.ತಾವು ಮುಳ್ಳು ನಡಿಸಿಕೊಂಡು ನಮಗೆ ಹೂವಿನ ಹಾಸಿಗೆ ಹಾಸಿಕೊಟ್ಟಿದ್ದಾರೆ. ಮಾನವನಿಗೆ ಪುಣ್ಯ ಸಂಪಾದನೆ ಮಾಡಬೇಕಾಗಿದ್ದರೆ ತೀರ್ಥಯಾತ್ರೆ ಮಾಡುವುದಲ್ಲ. ನದಿ-ಸಮುದ್ರಗಳಲ್ಲಿ ಸ್ನಾನ ಮಾಡುವದೂ ಅಲ್ಲ. ತಂದೆ-ತಾಯಿಯರ ಕಣ್ಣಲ್ಲಿ ನೀರು ತರಿಸದಿರುವುದೇ ಪುಣ್ಯ. ಜೀವನ ಪರ್ಯಂತ ಅವರ ಋಣದಿಂದ ಮುಕ್ತರಾಗಲು ಸಾಧ್ಯವಿಲ್ಲ. ಅವರು ಜೀವಂತವಿರುವವರೆಗೆ  ಸಂತೋಷದಿಂದ ನೋಡಿಕೊಂಡರೆ ಸಾಕು. ಹಣವಿದ್ದರೆ ಜಗತ್ತಿನಲ್ಲಿ ಎಲ್ಲವೂ ಸಿಗುತ್ತದೆ. ಆದರೆ, ತಂದೆ-ತಾಯಿ ಸಿಗುವುದಿಲ್ಲ. ಉಪ್ಪಿಗಿಂತ ರುಚಿಯಿಲ್ಲ. ತಂದೆ-ತಯಿಗಳಿಗಿಂತ ದೇವರಿಲ್ಲ. ಅವರ ಪವಿತ್ರ ಚರಣಾರವಿಂದಗಳಿಗೆ ಸದಾ ನಮಸ್ಕರಿಸಬೇಕು.ನಾವು ಮಕ್ಕಳಿಂದ ಸೇವೆಯನ್ನು ಇಚ್ಛಿಸುವದಾದರೆ ಮೊದಲು ನಾವು ಮಕ್ಕಳಾಗಿ ಸೇವೆಮಾಡಬೇಕು.

ಪ್ರತಿ ವರ್ಷ ಮೇ ತಿಂಗಳ ಹನ್ನೊಂದನೆಯ ತಾರೀಖು ತಾಯಿಯ ದಿನವನ್ನಾಗಿ ಪ್ರಪಂಚದಾದ್ಯಂತ ಆಚರಿಸಲಾಗುತ್ತಿದೆ. ಆ ದಿನ ನಮ್ಮ ಅವ್ವ, ಅಮ್ಮ ಜನ್ಮಧಾತೆ, ಕರುಣಾಮಯಿ ಎಂದು ಹೇಳಿಕೊಂಡು ಕೇವಲ ಶಬ್ಧಗಳಲ್ಲಿ 'ಮಾತೃದೇವತೆ' ಎಂದು ಹೇಳಿಕೊಂಡು ಗೌರವ ಸಲ್ಲಿಸುವುದರಲ್ಲಿ ಏನಿದೆ ಫಲ? ಇಂದು ನಾವು ತಂದೆ-ತಾಯಂದಿರನ್ನೇ ಹೇಗೆ ನಡೆಸಿಕೊಳ್ಳುತ್ತಿದ್ದೇವೆ? ಎಂಬುದು ಮುಖ್ಯ. ಕೆಲವು ಕಡೆ ಅವರೊಂದು ಹೊರೆ ಎಂದು ಭಾವಿಸಿ ವೃದ್ಧಾಶ್ರಮಕ್ಕೆ ಸೇರಿಸುತ್ತಾರೆ. ಅವರಿಂದ ದೂರವಿದ್ದರೆ ಸಾಕೆಂದು ಯಾವುದೋ ಕಾರಣದಿಂದ, ಪ್ರೀತಿ ಇದ್ದರೂ ಅನಿವಾರ್ಯವಾಗಿ ಕಟ್ಟಿಕೊಂಡವಳ ಆಶೋತ್ತರಕ್ಕೆ ಮರುಳಾಗಿ, ಅವಳೊಂದಿಗೆ ಸ್ಪಂದಿಸುತ್ತ ಹೆತ್ತವರನ್ನು ಕಡೆಗಾಣಿಸುತ್ತಿರುವುದು ಕಂಡು ಬರುತ್ತಿದೆ. ಇದೊಂದು ವ್ಯಥಧೆ. ಬದುಕು ಕೊಟ್ಟು ಬೆಳೆಸಿದ ಅಪ್ಪ ಅಮ್ಮನ ಮುಖಗಳಲ್ಲೂ ನಗೆ ಅರಳಿಸಬೇಕು. ಅವರ ಬಾಳೂ ಹಸನಾಗಬೇಕು. ಈ ದಿಶೆಯಲ್ಲಿ ಯುವ ಜನಾಂಗ ಸ್ಪಂದಿಸಿದಲ್ಲಿ ಅಮ್ಮನ ದಿನಕ್ಕೆ ಅರ್ಥ ಬಂದೀತು!! ಅ

***ಸುಧಾಕರ ಕುರಂದವಾಡ***



# ಕರ್ನಾಟಕ ಸಕಲ ವೈಭವಗಳ ನೆಲೆವೀಡು


ಕರ್ನಾಟಕ ಅತಿ ಭವ್ಯವಾದ ಸಾಂಸ್ಕೃತಿಕ ಪರಂಪರೆಯುಳ್ಳ ಐತಿಹಾಸಿಕ ನಾಡು, ವೀರ ಸಾಹಸಿಗಳ ತವರು, ಉಜ್ವಲ ಇತಿಹಾಸದ ತೊಟ್ಟಿಲು, ಭವ್ಯ ಪ್ರಾಚೀನ ಪರಂಪರೆಯುಳ್ಳ ಕರುನಾಡು, ಕಂಪಿನನಾಡು, ಕಲೆಗಳ ಬೀಡು, ಹಸಿರುವನಗಳ ವೈವಿಧ್ಯಮಯ ಪಕ್ಷಿಸಂಕುಲಗಳ ಭೂದೃಶ್ಯಗಳುಳ್ಳ ಖನಿಜ ಸಂಪತ್ತು ಹೊಂದಿರುವ ಸಂಪದ್ಭರಿತವಾದ ನಾಡು, ಬೆಟ್ಟ ಘಟ್ಟಗಳ ಬೀಡು, ದೇಗುಲಗಳ ಕೋಟೆ ಕೊತ್ತಲುಗಳ ಬೀಡು, ಮೌಲಿಕ ವೃಕ್ಷಗಳ ಸಿರಿತವರು, ನದಿಗಳು ಮೈದೊಳೆವ ನಲುನಾಡು, ಜಲಪಾತಗಳ ತವರೂರು, ಮಹಾತಪಸ್ವಿಗಳ ಹಿರಿಮೆಯ ಹಿರಿನಾಡು, ಪರಿಪಕ್ವ ಮನಸುಳ್ಳ ಪ್ರಬುದ್ಧ ಶರಣದಾಸರ ಬೀಡು.

ಪ್ರಾಚೀನ ಮತ್ತು ಅರ್ವಾಚೀನ ಸಂಪ್ರದಾಯಗಳು ಇಲ್ಲಿ ಸಮ್ಮಿಲನಗೊಂಡಿದ್ದು ಎರಡು ಸಾವಿರ ವರ್ಷಗಳ ಪ್ರಾಚೀನತೆಯುಳ್ಳ ಕರ್ನಾಟಕವು ಅನೇಕ ಅದ್ಭುತಗಳನ್ನು ತುಂಬಿಕೊಂಡಿದ್ದು ಸಕಲ ಕಲೆಗಳ ಆಗರವಾಗಿದೆ. ತನ್ನದೇ ಆದ ಸಂಸ್ಕೃತಿಯನ್ನು ಹೊಂದಿದ್ದು ಸಾಂಸ್ಕೃತಿಕ ಸಂಪತ್ತಿನ ಖಣಿಯಾಗಿದೆ.

ಕರ್ನಾಟಕವು ಕಾವೇರಿಯಿಂದ ಗೋದಾವರಿಯವರೆಗೆ ಹಬ್ಬಿದ ನಾಡೆಂದು ಸಾವಿರ ವರ್ಷಗಳ ಹಿಂದೆ ಇದ್ದ ರಾಷ್ಟ್ರಕೂಟ ದೊರೆ ನೃಪತುಂಗನು ತನ್ನ ಕವಿರಾಜಮಾರ್ಗದಲ್ಲಿ ತಿಳಿಸಿದ್ದಾನೆ. ಮರುಜನ್ಮದಲ್ಲಿ ಬನವಾಸಿ ನಾಡಿನ ಬನದಲ್ಲಿ ದುಂಬಿಯಾಗಿಯೋ, ಕೋಗಿಲೆಯಾಗಿಯೋ ಹುಟ್ಟಬೇಕೆಂದು ಬಯಸಿದ ಪಂಪ ಮಹಾಕವಿಯು ಈ ನಾಡಿನ ಸೊಬಗನ್ನು ನೋಡಿ "ಆರಂಕುಶ ಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಂ"ಎಂದು ಹಾಡಿ ಎಲ್ಲಾ ಕನ್ನಡ ಕವಿಗಳ ಮನಸ್ಸನ್ನು ಪ್ರತಿಬಿಂಬಿಸಿದ್ದಾನೆ.

"ಕನ್ನಡ ವೆನಿಪ್ಪಾ ನಾಡು ಚೆಲ್ವಾದುದೆಂದು" ಕವಿ ಅಂಡಯ್ಯ ಈ ಚೆಲುವ ಕನ್ನಡ ನಾಡನ್ನು ವರ್ಣಿಸಿದ್ದಾನೆ. ಹೆಚ್ಚು ಬಿಸಿಲಿಲ್ಲದ ಹೆಚು ಚಳಿಯೂ ಇಲ್ಲದ ಈ ತಾಣ ಅತುಲ ಸೌಂದರ್ಯದ ಅನುಪಮ ದೃಶ್ಯಾವಳಿಗಳ ಕಮನೀಯ ನಾಡು, ಸುಶಿಕ್ಷಿತರ ನೆಲೆವೀಡು, ಇತಿಹಾಸದ ಸಿರಿಭಂಡಾರ, ರಮ್ಯ ಕರಾವಳಿ ಪ್ರದೇಶವು ಸುಂದರವಾಗಿದ್ದು ಕಡಲ ಮೊರೆತ ಮುದ ನೀಡುತ್ತಿದೆ. ಉತ್ತರಕನ್ನಡ ಜಿಲ್ಲೆಯ 'ಯಾಣ' ಪ್ರಕೃತಿದತ್ತವಾದ ಪ್ರದೇಶ, ಕರಾವಳಿ ಪ್ರದೇಶಗಳಲ್ಲಿ ಅಭಿಜಾತ ಕಲೆಗಳು ಬೆಳೆದು ಸಾಹಿತ್ಯ ಕಲೆಗಳ ಭಂಡಾರವಾಗಿದೆ.ಕೋಲಾರ ಹೊನ್ನಬೀಡು, ಬೆಂಗಳೂರು ರೇಷ್ಮೆ, ಕೊಡಗು ಕಾಫಿ ಹೀಗೆ ಒಂದೊಂದು ಸ್ಥಳವು ವಿಶಿಷ್ಟ ಸಂಪತ್ತನ್ನು ಹೊಂದಿರುವ ನಾಡು, ಹಂಪಿಯ ಹಾದಿಬದಿಯಲ್ಲಿ ಮುತ್ತು ವಜ್ರಗಳನ್ನು ಕೊಳಗದಲ್ಲಿ ಅಳೆದು ಮಾರುತ್ತಿದ್ದರು. ಹೀಗಾಗಿ ಕನ್ನಡ ನಾಡು ಸ್ವರ್ಣ ಸುಂದರ ನಾಡು, ಶಿಲ್ಪ ಚೇತನ ನಾಡು, ಶಿಲ್ಪಕಲೆಯ ಮೇರು ತಾಣಗಳು ಎನಿಸಿಕೊಂಡಿದೆ.

ವಿಶ್ವಪರಂಪರೆಯ ಹಂಪಿ, ಪಟ್ಟದಕಲ್ಲು, ಬೇಲೂರು, ಹಳೇಬೀಡು, ಕಾರ್ಕಳ, ಬಾದಾಮಿ, ಐಹೊಳೆ, ಶ್ರವಣಬೆಳಗೊಳ, ಸೋಮನಾಥಪುರ





ಮುಂತಾದ ತಾಣಗಳು ಕಲಾ ಸೊಬಗು ಶಿಲ್ಪಚಾತುರ್ಯ ಅದ್ಭುತವಾದುದು. ಕಲ್ಲಾನಾವಿಲಾಸ, ಶಿಲ್ಪಸಾಮರಸ್ಯ, ಸೂಕ್ಷ್ಮ ಕೆತ್ತನೆ, ಶಿಲ್ಪಿಗಳ ಅದ್ಭುತ ಕೃತಶಕ್ತಿ ದೃಗೋಚರವಾಗುವುದು.

ಕರ್ನಾಟಕವು ನದಿಗಳ ನಾಡು, ಜಲಪಾತದ ಖ್ಯಾತ ನಾಡು, ಕೃಷ್ಣ, ಗೋದಾವರಿ, ತುಂಗಭದ್ರ, ಶರಾವತಿ, ಕಾವೇರಿ ಮತ್ತು ಮಲಪ್ರಭಾ ನದಿಗಳೂ ಹರಿಯುವುವು. ಪಶ್ಚಿಮ ಘಟ್ಟವು ಕರ್ನಾಟಕದ ಎಲ್ಲಾ ನದಿಗಳಿಗೂ ತಾಯಿ. ಈಗ ಪಶ್ಚಿಮ ಘಟ್ಟಕ್ಕೆ ವಿಶ್ವಪರಂಪರೆಯ ಮನ್ನಣೆ ಸಿಕ್ಕಿದೆ. ವಿಶ್ವದ ಎಂಟು ಜೈವಿಕ ವೈವಿಧ್ಯದ ಅಗ್ರತಾಣಗಳಲ್ಲಿ ಒಂದಾದ ಪಶ್ಚಿಮ ಘಟ್ಟ ಶ್ರೇಣಿಯು 39 ವಿಶಿಷ್ಟ ನೆಲೆಗಳಿಗೆ ಯುನೆಸ್ಕೋ ವಿಶ್ವ ಪರಂಪರೆಯ ಮನ್ನಣೆಯನ್ನು ಪಡೆದಿದೆ. ಇಲ್ಲಿರುವ ಅಪೂರ್ವ ಜೀವ ಜಗತ್ತಿನ ವೈಜ್ಞಾನಿಕ ಸಂರಕ್ಷಣೆಯ ದೃಷ್ಟಿಯಿಂದ ಇದೊಂದು ಮಹತ್ವದ ಬೆಳವಣಿಗೆ ಎಂದು ಸುಮಂಗಲಾ ಎಸ್. ಮುಮ್ಮಿಗಟ್ಟಿ ವರ್ಣಿಸಿದ್ದಾರೆ. ಪಶ್ಚಿಮ ಘಟ್ಟಗಳು ಜೀವ ಜಗತ್ತಿನ ಸೂಕ್ಷ್ಮ ಕೊಂಡಿಗಳೆಂದು ಎಲ್ಲರಿಗೂ ತಿಳಿದಿದೆ. ಇವು ಹಿಮಾಲಯ ಪರ್ವತಗಳಿಗಿಂತ ಪುರಾತನ ಕಾಲದವು. ಹಿಮಾಲಯಗಳು ಜನ್ಮತಳೆಯುವ ಎಂಟು ದಶಲಕ್ಷಗಳ ಹಿಂದೆಯೇ ಇವು ಉದ್ಭವಿಸಿದವು ಎನ್ನುತ್ತಾರೆ.

ವಿಶ್ವದ ಉನ್ನತ ಜಲಪಾತಗಳಲ್ಲಿ ಒಂದಾದ ಜೋಗ ಜಲಪಾತ ನಮ್ಮ ನಾಡಿನಲ್ಲಿದೆ. ಹೇಮಾವತಿ, ಕಪಿಲಾ, ಲಕ್ಷ್ಮಣತೀರ್ಥ, ಮಲಪ್ರಭಾ, ಘಟಪ್ರಭಾ, ಶರಾವತಿ, ಕಾಳಿ, ಅರ್ಕಾವತಿ, ನೇತ್ರಾವತಿಗಳಿಂದ ಮೈದೊಳೆವ ನಲುನಾಡು ಎನಿಸಿಕೊಂಡಿರುವ ಸಮೃದ್ಧ ಧಾಮ, ಏಷ್ಯಾಖಂಡದಲ್ಲೇ ಪ್ರಥಮ ಬಾರಿಗೆ



ವಿದ್ಯುತ್ ಉತ್ಪಾದಿಸಿದುದು ಕರ್ನಾಟಕ ರಾಜ್ಯದ ಶಿವನಸಮುದ್ರದಲ್ಲಿ ಎನ್ನುವುದು ಹೆಮ್ಮೆಯ ಸಂಗತಿ.

ಭಾಷೆ ಮನುಷ್ಯಮನ ಪ್ರಬಲ ಅಸ್ತ್ರಗಳಲೊಂದು, ನಮ್ಮ ಕನ್ನಡ ಶ್ರೀಮಂತ ಭಾಷೆ, ತನ್ನದೇ ಆದ ಸ್ವಂತ ಲಿಪಿ ಇದೆ.ಪ್ರತಿ ಸಂಗತ ಧ್ವನಿಗೂ ನಿರ್ದಿಷ್ಟ ದೃಶ್ಯಿಕ ಸಂಕೇತವನ್ನು ಹೊಂದಿರುವ ಕನ್ನಡ ಜಗತ್ತಿನ ಅತ್ಯಂತ ಸುಂದರ, ತಾರ್ಕಿಕ, ವೈಜ್ಞಾನಿಕ ನಿರ್ದಿಷ್ಟ ಹಾಗೂ ನಿಸಂದಿಗ್ಧ ಲಿಪಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.ನಿರಂತರವಾಗಿ ಎರಡು ಸಾವಿರ ವರ್ಷಗಳ ಕಾಲ ವಿಕಸನಗೊಳ್ಳುತ್ತಲೇ ಸಾಗಿರುವ ಲಿಪಿ ಇಂದು ವಿಶ್ವದ ಲಿಪಿಗಳ ರಾಣಿ ಎಂದೆನಿಸಿಕೊಂಡಿದೆ. ನಮ್ಮ ಕನ್ನಡ ಭಾಷೆಯು ಒಂದು ದ್ರಾವಿಡ ಭಾಷೆ, ಈ ಭಾಷೆ ಸ್ವತಂತ್ರ ಭಾಷೆಯಾಗಿ ಬೆಳೆದ ಮೇಲೆ ದೀರ್ಘಕಾಲ ಲಿಖಿತ ರೂಪಕಿಳಿಯದೆ ಕೇವಲ ಆಡು ನುಡಿಯಾಗಿಯೇ ಉಳಿದಿದ್ದಂತೆ ತೋರುತ್ತದೆ. ಕ್ರಿ.ಶ. 450ರ ಹಲ್ಮಿಡಿ ಶಾಸನವು ಪ್ರಸ್ತುತ ಲಭ್ಯವಾಗಿರುವ ಅತ್ಯಂತ ಪ್ರಾಚೀನವಾದ ಕನ್ನಡ ಲೇಖನವಾಗಿದೆ.ಗದ್ಯರೂಪದಲ್ಲಿರುವ ಈ ಶಾಸನದಲ್ಲಿ ಕೇವಲ ಇಪ್ಪತ್ತು ಪದಗಳು ಮಾತ್ರ ಕನ್ನಡ, ಉಳಿದುದೆಲ್ಲವೂ ಸಂಸ್ಕೃತ, ಅಳಕದಂಬನೆಂಬ ರಾಜನು ವಿಜರಸನೆಂಬುವನಿಗೆ ಎರಡು ಗ್ರಾಮಗಳನ್ನು ದತ್ತಿಯಾಗಿ ಕೊಟ್ಟದ್ದು ಎಂಬುದು ಇದರ ಸಾರಾಂಶ.

ಕನ್ನಡ ಲಿಪಿ ಸುಂದರವಾಗಿದ್ದು ದುಂಡು ದುಂಡಾಗಿ ಮುತ್ತಿನ ಅಕ್ಷರದಂತಿದೆ. ಅಕ್ಷರ ಜ್ಞಾನ ಭಂಡಾರಕ್ಕೆ ಸಾಧನವಾಗಿದೆ. ಜಗತ್ತಿನ ಕೆಲವೇ ಶಾಸ್ತ್ರೀಯ ಭಾಷೆಗಳಲ್ಲಿ ಕನ್ನಡ ಒಂದು. 1558 ವರ್ಷಗಳಷ್ಟು ಹಿಂದೆಯೇ ಕನ್ನಡ ಆಡಳಿತದಲ್ಲಿ ಬಳಕೆಯಾಗುತ್ತಿತ್ತು ಎಂಬುದಕ್ಕೆ ಈ ಹಲ್ಮಿಡಿ ಶಾಸನ ಆಧಾರವನ್ನು ಒದಗಿಸುತ್ತದೆ.ಈ ಶಾಸನವು ಪ್ರಥಮ ಕನ್ನಡ ಶಾಸನವಾಗಿದೆ. ಈ ನಮ್ಮ ಭಾಷೆಗೆ, ಸಂಸ್ಕೃತಿ ಕಲೆಗಳಿಗೆ ಪ್ರಾಚೀನ ಇತಿಹಾಸವಿದೆ. ಇಪ್ಪತ್ತನೇ ಶತಮಾನದಲ್ಲಿ ಕನ್ನಡ ಸಾಹಿತ್ಯ ಸಮೃದ್ಧವಾಗಿ ಬೆಳೆದು ಕುವೆಂಪು, ಮಾಸ್ತಿ, ಬೇಂದ್ರೆ, ಕಾರಂತ ಮುಂತಾದ ವಿಭಿನ್ನ ಕವಿಗಳ ಪರಂಪರೆಯ ಬೆಳೆಯಿತು.

ಕನ್ನಡ ನಾಡು ನುಡಿಗಾಗಿ ಅನನ್ಯಬದ್ಧತೆಯಿಂದ ದುಡಿದ ಅತ್ಯಂತ ಸೋಪಜ್ಞ ಮತ್ತು ಸೃಜನಶೀಲ ಬರಹಗಾರರನ್ನು ಹೊಂದಿದೆ. ಇವರು ಇತಿಹಾಸ ಮತ್ತು ಪುರಾಣಗಳಲ್ಲಿರುವ ಸತ್ಯಾಸತ್ಯತೆಯನ್ನು ಹೊರತೆಗೆದು ಕನ್ನಡಿಗರ ಹಿರಿಮೆ ಗರಿಮೆ, ಸಾಂಸ್ಕೃತಿಕ ಸಮಗ್ರತೆ, ಸಾಂಸ್ಕೃತಿಕ ವಿಶಿಷ್ಟತೆ ಮತ್ತು ಪ್ರತಿಭೆ ನಾಡನ್ನು ಶ್ರೀಮಂತಗೊಳಿಸಿದೆ. ಕನ್ನಡಭಾಷೆ ಎಂಟು ಜ್ಞಾನಪೀಠ ಪ್ರಶಸ್ತಿಗಳಿಸಿ ನಾಡನ್ನು ಶ್ರೀಮಂತಗೊಳಿಸಿದರೆ ಮತ್ತೇ ವಿವಿಧ ಕ್ಷೇತ್ರಗಳಲ್ಲಿ ದುಡಿದು ಪರಿಣತರಾಗಿ 'ಕರ್ನಾಟಕ ರತ್ನ' ರೆನಿಸಿಕೊಂಡಿದ್ದಾರೆ. 51 ಬಾರಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಪುರಸ್ಕಾರ ಕನ್ನಡಕ್ಕೆ ದೊರೆತಿದೆ. ಮಧ್ಯಪ್ರದೇಶದ ಸರ್ಕಾರ ನೀಡಿರುವ ಕಬೀರ್ ಸಮ್ಮಾನ್ ಗೌರವ ನೀಡಿದೆ. ಕೇರಳದ ಕುಮಾರನ್ ಆಶಾನ್ ಪ್ರಶಸ್ತಿಯೂ ಕನ್ನಡಕ್ಕೆ ಲಭ್ಯವಾಗಿದೆ. ಕವಿ ಮುದ್ದಣ್ಣನಿಂದ ಆಧುನಿಕ ಕನ್ನಡ ಸಾಹಿತ್ಯವು ಪುನರುಜ್ಜೀವನಗೊಂಡು ಕಾವ್ಯ, ನಾಟಕ, ಕಥೆ, ಕಾದಂಬರಿ, ವಿಮರ್ಶೆ, ಪ್ರಬಂಧ, ಹರಟೆ, ಪ್ರವಾಸ ಸಾಹಿತ್ಯ, ದಿನಚರಿ, ಪತ್ರ ಸಾಹಿತ್ಯ ಹೀಗೆ ಸಾಹಿತ್ಯದ ಎಲ್ಲಾ ಪ್ರಕಾರಗಳು ವೈವಿಧ್ಯಪೂರ್ಣವಾಗಿ ಬೆಳೆದುಕೊಂಡು

ಬಂದಿದೆ.ಕನ್ನಡನಾಡಿನಲ್ಲಿ ಬಹಳ ಹಿಂದೆಯೇ ವೈಜ್ಞಾನಿಕ ಚಿಂತನೆಗೊಳಪಟ್ಟ ಅನೇಕ ದಾಖಲೆಗಳಿವೆ. ವೈಜ್ಞಾನಿಕ ಚಿಂತನೆ, ತಂತ್ರಕೌಶಲ್ಯಗಳ ಸಾಧನೆ, ವಿಕಾಸಗಳ ವಿಸ್ತೃತ ಅಧ್ಯಯನ ನಡೆದಿತ್ತು. ಕನ್ನಡದಲ್ಲಿ ವಿಜ್ಞಾನ ಸಾಹಿತ್ಯದ ಬೆಳವಣಿಗೆಗೆ ಮತ್ತು ತಾಂತ್ರಿಕರಣಕ್ಕೆ ಈ ನಾಡು ನೀಡಿದ ಕೊಡುಗೆ ಅಪಾರವಾಗಿದೆ. ಕೃಷಿ, ವೈದ್ಯಕೀಯ, ಪರಿಸರ, ಗಣಕ ಮತ್ತು ವಿಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದ ಪತ್ರಿಕೋದ್ಯಮ ಮತ್ತು ಬ್ಯಾಂಕಿಂಗ್ ಉದ್ಯಮದಲ್ಲಿ ಮುನ್ನಡೆ ಸಾಧಿಸಿದೆ.



ಭಾರತದ ಬ್ಯಾಂಕಿಂಗ್ ಇತಿಹಾಸದಲ್ಲಿ ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಗೆ ತನ್ನದೇ ಸ್ಥಾನವಿದ್ದು, ಕರ್ನಾಟಕದಲ್ಲಿನ ಆಧುನಿಕ ಬ್ಯಾಂಕಿಂಗ್ ಉದ್ಯಮದ ತೊಟ್ಟಿಲು ಎನಿಸಿಕೊಂಡಿದೆ ಮತ್ತು ಹೆಚ್ಚು ಸುರಕ್ಷತೆ ಹೊಂದಿರುವ ಜಿಲ್ಲೆ ಭಾರತದ ಸಹಕಾರ ನಕ್ಷೆಯಲ್ಲಿ ಕರ್ನಾಟಕ್ಕೆ ತನ್ನದೇ ಆದ ಸ್ಥಾನ ಪಡೆದಿದೆ.

ಜಾನಪದ ಸಾಹಿತ್ಯ ಸಂಪದ್ಭರಿತವಾಗಿದ್ದು ಇದರಲ್ಲಿ ಅನೇಕ ಕಲೆಗಳು ಜೀವಂತವಾಗಿವೆ. ಜಾನಪದ ನೃತ್ಯಗಳು ಮತ್ತು ಗ್ರಾಮೀಣರ ಬದುಕಿನ ಚೇತನಯುಕ್ತವಾಗಿದೆ. ಪುರಾತನ ಕಾಲದಿಂದಲೂ ಕಾಡಿನ ಜನರು ತಮ್ಮ ಬಿಡುವಿನ ವೇಳೆಯಲ್ಲಿ ಮನರಂಜನೆಗಾಗಿ ರೂಪಿಸಿಕೊಂಡ ಕೆಲವು ವಾದಯಗಳು ಹೀಗಿವೆ. ಕೊಳಲು, ತಪ್ಪಡಿ, ಡೋಲು, ಪುಂಗ, ತಂಬೂರಿ, ಚಾಡಕಿ, ಡಮರ, ಕಹಳೆ, ಸನಾದಿ, ಡೊಳ್ಳು, ಬುಡಬುಡುಕಿ, ಡೂಲ, ನಗಾರಿ, ಮೃದಂಗ, ಹಾರ್ಮೋನಿಯಂ, ಜಾಗಟೆ, ತಬಲ, ಪಿಟೀಲು ಇತ್ಯಾದಿ (ಇತಿಹಾಸ ದರ್ಶನ–ಕಲ್ಲನಗೌಡ ತಿ.ಪಾಟೀಲ)

ಕರ್ನಾಟಕದಲ್ಲಿ ಭರತನಾಟ್ಯದ ಮೂಲವನ್ನು ನಾಲ್ಕನೆ ಶತಮಾನದಿಂದಲೇ ಕಾಣಬಹುದು.ತಲಕಾಡು, ತಾಳಗುಂದ, ಬಳ್ಳಿಗಾಮಿಗಳಲ್ಲಿ ಭರತನಾಟ್ಯದ ವಿದ್ಯಾಪೀಠಗಳಿದ್ದವು.

ಹರಿಕಥೆ ಅಂದು ಒಂದು ಪ್ರಬಲ ಸಮೂಹ ಮಾಧ್ಯಮವಾಗಿತ್ತು.ಕರ್ನಾಟಕ ಭವ್ಯ ಸಾಂಸ್ಕೃತಿಕ ಸಂಪತ್ತು ತನ್ನದೇ ಆದ ಮೌಲ್ಯಗಳಿಂದ ವಿಶ್ವದಲ್ಲಿ ಮನ್ನಣೆ ಪಡೆದಿದೆ.ಇದು ಸ್ಮಾರಕ, ಪುರಾತತ್ವ ನೆಲೆ ಹಾಗೂ ಅವಶೇಷ, ಶಾಸನ, ಹಸ್ತಪ್ರತಿ, ನಾಣ್ಯ, ಮೂರ್ತಿವರ್ಣಚಿತ್ರಗಳು, ಕಲೆ, ಧರ್ಮ, ಸಾಹಿತ್ಯ, ಗುಡಿಕೈಗಾರಿಕೆ ಹೀಗೆ ಇತಿಹಾಸ ಬಿಂಬಿಸುವ ವಿವಿಧ ಕಲಾತ್ಮಕ ವಸ್ತುಗಳನ್ನೊಳಗೊಂಡಿದೆ.

ಕರ್ನಾಟಕವು ಸಂಗೀತದ ತವರೂರು, ಕರ್ನಾಟಕ ಸಂಗೀತದ ಅಂತಸ್ಸತ್ವ ಆಳವಾದುದು ಮತ್ತು ಗಾಢವಾದುದು.ಕರ್ನಾಟಕ ಸಂಗೀತ ಮತ್ತು ಹಿಂದೂಸ್ತಾನಿ ಸಂಗೀತಗಳೆರಡೂ ಕರ್ನಾಟಕದಲ್ಲೆ ಜನ್ಮ ತಾಳಿದವು. ಶ್ರೀಮತಿ ಗಂಗೂಬಾಯಿ ಹಾನಗಲ್, ಶ್ರೀ ಮಲ್ಲಿಕಾರ್ಜುನ ಮನ್ಸೂರ್ ಮತ್ತು ಭೀಮಸೇನರಾವ್ ಈ ಸಂಗೀತಗಾರರು ವಿಶ್ವವಿಖ್ಯಾತ ಹಿಂದೂಸ್ತಾನಿ ಗಾಯಕ ಕಾಳಿದಾಸ ಪ್ರಶಸ್ತಿ ಪುರಸ್ಕೃತರಾಗಿದ್ದರು.ಶಿಲ್ಪದಲ್ಲಿ ಕೂಡ ಸಂಗೀತ, ಸಂಗೀತಗಾರರ ಮೇಳ, ಮೃದಂಗ, ತಂಬೂರಿ, ರುದ್ರವೀಣೆ, ಸರಸ್ವತಿ ವೀಣೆ, ತಾಂಡವ ನೃತ್ಯ, ವ್ಯಾಸ ನೃತ್ಯಗಳಿದ್ದುವೆಂದು ತಿಳಿಯುತ್ತಿದೆ.ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ರಂಗೋಲಿ ಸ್ಪರ್ಧೆಯಲ್ಲಿ ಭಾಗವಹಿಸುತ್ತಿದ್ದರು.ರಂಗೋಲಿಗಳು ಮನಸ್ಸಿನ ಕಲ್ಪನೆಗಳು, ಶತಮಾನಗಳಿಂದ ಕರ್ನಾಟಕದ ನಾರು, ಹತ್ತಿ, ರೇಷ್ಮೆಯ ಸೀರೆಗಳು ನಾಡಿನ ಮಹಿಳೆಯರ ಕಲಾಪ್ರಜ್ಞೆಯನ್ನು ಪ್ರದರ್ಶಿಸಿರುವರು. ವಿಜಯನಗರಕಾಲೀನ ಕನ್ನಡತಿಯರ ಸೀರೆಗಳು ಅದರ ನೈಪುಣ್ಯತೆಯನ್ನು ತೋರಿವೆ. ಸೂತ್ರದ ಬೊಂಬೆಗಳಲ್ಲಿ ತೊಗಲು ಬೊಂಬೆಗಳಲ್ಲಿ, ಕೀಲು ಬೊಂಬೆಗಳಲ್ಲಿ, ಮರದ ಬೊಂಬೆಗಳಲ್ಲಿ ಕಲಾತ್ಮಕವಾದ ಬೊಂಬೆಗಳನ್ನು ಸಂಗ್ರಹಾಲಯಗಳಲ್ಲಿ ಕಾಣಬಹುದು. ಇವುಗಳಲ್ಲಿ ನಮ್ಮ ಪೂರ್ವಿಕರ ಕಲ್ಪನೆಗಳನ್ನು ಗುರುತಿಸಬಹುದು.




ಮಹಿಳಾ ಸಾಹಿತ್ಯವು ಹನ್ನೊಂದನೇ ಶತಮಾನದಲ್ಲೇ ಗಮನಾರ್ಹವಾದ ಬೆಳವಣಿಗೆಯಾಗಿತ್ತು. ಪ್ರೌಢಿಮೆ ಮೆರೆದ ಕವಿಯಿತ್ರಿಯರು ಅವರ ಕಾವ್ಯದ ನಿಲುವುಗಳೂ, ಪ್ರತಿಪಾದಿಸಿದ ಸಾಮಾಜಿಕ ಮೌಲ್ಯಗಳು, ಹುಟ್ಟು ಹಾಕಿದ ಚೈತನ್ಯ, ವೈವಿಧ್ಯತೆ, ಸೃಜನಶೀಲತೆ, ವೈಚಾರಿಕತೆ ವಿಸ್ತಾರಗೊಂಡು ಕನ್ನಡಕ್ಕೆ ಅನುಪಮವಾದ ಕೊಡುಗೆ ನೀಡಿದ್ದಾರೆ. ಕಂತಿಯಿಂದ ಆರಂಭವಾದ ಮಹಾದೇವಿಯಕ್ಕ, ಸಂಚಿಹೊನ್ನಮ್ಮ, ಮಹಾದೇವಿ, ನೀಲಾಂಬಿಕೆ, ಗಂಗಾಂಬಿಕೆ, ಮುಕ್ತಾಯಕ್ಕ, ರಮ್ಮವ್ವೆಯವರ ಕೊಡುಗೆ ಅದ್ವಿತೀಯವಾದುದು. ಕನ್ನಡದಲ್ಲಿ ಕೃತಿ ರಚನೆ ಮಾಡಿದ ಮಹಿಳೆಯರ ಸಾಧನೆ ಮಹತ್ತರವಾದುದು. ಕರ್ನಾಟಕ ಭಾರತೀಯ ನಾಗರೀಕತೆಯ ನೆಲೆಯಾಗಿದ್ದು ಪ್ರಾಚೀನ ಶಿಕ್ಷಣ ಕ್ರಿಯಾಶೀಲವಾಗಿತ್ತು.

ಅಬ್ಬಕ್ಕರಾಣಿ, ಒನಕೆ ಓಬವ್ವ, ಕಿತ್ತೂರು ರಾಣಿ ಚೆನ್ನಮ್ಮ ಮುಂತಾದವರು ವೀರ ಮಹಿಳೆಯರಾಗಿ ಹೋರಾಟದ ಕಥೆ ರೋಚಕವಾಗಿದ್ದು ಧೀರ ಸ್ತ್ರೀಯರ ಕನ್ನಡನಾಡು ಎನಿಸಿಕೊಂಡಿದೆ.

ನೃಪತುಂಗ, ಪಂಪ, ರನ್ನ, ಪೊನ್ನ, ನಾಗಚಂದ್ರ, ದುರ್ಗಸಿಂಹ, ಹರಿಹರ, ರಾಘವಾಂಕ, ಬಸವೇಶ್ವರ, ಪ್ರಭುದೇವ, ಸಿದ್ಧರಾಮ, ಅಕ್ಕಮಹಾದೇವಿ, ಚೆನ್ನಬಸವಣ್ಣರು, ಪುರಂದರದಾಸರು, ಕನಕದಾಸರು, ವಿಜಯದಾಸರು, ಶ್ರೀಪಾದಾಯರು, ಗೋಪಾಲದಾಸರು, ಜಗನ್ನಾಥದಾಸರು, ಕುಮಾರವ್ಯಾಸ, ಲಕ್ಷ್ಮೀಶ, ಚಾಟು ವಿಠ್ಠಲ, ಚೌಡರಸ ಇವರುಗಳ ಸಾಂಸ್ಕೃತಿಕ ಪ್ರತಿಭೆ ನಾಡನ್ನು ಶ್ರೀಮಂತಗೊಳಿಸಿದೆ.

ಜೈನ, ವೀರಶೈವ, ಬ್ರಾಹ್ಮಣ ಕವಿಗಳು, ಸಂತರು, ಶರಣರು ತಮ್ಮ ಕಾವ್ಯಗಳಿಂದ, ಗೀತೆಗಳಿಂದ, ವಚನಗಳಿಂದ ವಿವಿಧ ಕಾಲಘಟ್ಟಗಳಲ್ಲಿ ದೀರ್ಘಕಾಲದಲ್ಲಿ ಶ್ರೇಷ್ಠ ಕೃತಿಗಳನ್ನು ರಚಿಸಿ, ಕನ್ನಡ ಸಾರಸ್ವತ ಲೋಕಕ್ಕೆ ಅಮೋಘ ಕಾಣಿಕೆ ನೀಡಿದ್ದಾರೆ. ವಚನಗಳು ಸಮಾಜ ಸುಧಾರಣಾವಾದಿಯ ಮಹೋನ್ನತ ತತ್ವಗಳಾಗಿವೆ. ಕನ್ನಡ ಭಾಷೆಗೆ ಒಂದು ಹೊಸ ಶಕ್ತಿಯನ್ನು ನೀಡಿದವರು ವಚನಕಾರರು ಮತ್ತು ಆಧ್ಯಾತ್ಮ ಬೆರೆತ ಒಂದು ಸಾಮಾಜಿಕ ಚಳುವಳಿಯನ್ನು ತಂದರು.

ಹರಿದಾಸರು ಸಂಗೀತದ ಸೂಕ್ಷ್ಮರಾಗಗಗಳನ್ನು ಸಾದಾವಾದ್ಯಗಳಿಂದ ತಾಳಲಯಗಳೊಂದಿಗೆ ಹಾಡುವ ಗಹನವಾದ ವಿದ್ಯೆಯನ್ನು ಜನಸಾಮಾನ್ಯರಲ್ಲಿ ಹರಡಿ ಪ್ರಚಾರಗೊಳಿಸಿದರು. ಹರಿದಾಸರು ತಾಳ, ಮೌಳಿ, ದಂಡಿಗೆ, ಮದ್ದಲೆ, ಶಂಖ, ತಂಬೂರಿ, ಜಾಗಟೆ, ಕೊಳಲು ಮುಂತಾದ ಸಾದಾವಾದ್ಯಗಳನ್ನು ಬಳಸಿ ಗೌರಿ, ಗಾಂಧಾರಿ, ಗೌಳಪಂಡು, ಗೌರಿಭೂಷಣ, ಸಾರಂಗ, ಮೋಹನ, ಸಾವೇರಿ, ಸುರುಟಿ, ಭೈರವಿ ಬ್ಯಗದೆ, ಮಲ್ಹಾರಿದೇಶಿ, ಗುಂಡಕ್ರಿಯ, ಗುಜ್ಜರಿ, ಕಲ್ಯಾಣೀ ರಾಗಗಳಲ್ಲಿ ಪದಗಳನ್ನು ಹಾಡುತ್ತಿದ್ದರಂತೆ ಎಂಬ ಮಾಹಿತಿ ಇದೆ. ಹರಿದಾಸರ ರಚನೆಗಳು ಹರಿಪಾರಮ್ಯವನ್ನು ಉದ್ಘೋಷಿಸುತ್ತದೆ. ದಾಸ ಸಾಹಿತ್ಯವು ಕನ್ನಡ ಸಾಹಿತ್ಯದ ಒಂದು ಪ್ರಾಕಾರವಾಗಿ ಪರಿಗಣಿತವಾಗದ್ದು ಈ

ಸಾಂಸ್ಕೃತಿಕ ಪ್ರತಿಭೆನಾಡನ್ನು ಶ್ರೀಮಂತಗೊಳಿಸಿ ಕರ್ನಾಟಕ ಪ್ರತಿಭೆಯ ಗಣಿಯಾಗಿ ಕಲಾತ್ಮಕವಾದ ಸಾಂಸ್ಕೃತಿಕ ಪರಂಪರೆಗಳನ್ನು ಪ್ರತಿಬಿಂಬಿಸುವ ತಾಣವಾಗಿದೆ.ಭಕ್ತಿಯ ಬೀಡಾಗಿ ಸಂಸ್ಕೃತಿಯ ನೆಲೆಯಾಗಿ ಸಂಪತ್ತು ಸಮೃದ್ಧಿಯಿಂದ ಕರ್ನಾಟಕ ಪ್ರಗತಿಪಥದಲ್ಲಿ ಸಾಗುತ್ತಾ ಇದೆ.

ಮತಧರ್ಮಗಳಿಗೆ ಕರ್ನಾಟಕ ಆಶ್ರಯ ನೀಡಿ ಧಾರ್ಮಿಕ ಸಹಿಷ್ಣುತೆಗೆ ಹೆಸರಾಗಿದೆ. ಜೈನ, ಬುದ್ಧ, ಅದ್ವೈತ, ದ್ವೈತ ವಿಶಿಷ್ಟಾದ್ವೈತ, ವೀರಶೈವ, ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳು ಕರ್ನಾಟಕದಲ್ಲಿ ನೆಲೆಯೂರಿ ಕನ್ನಡಿಗರು ಧರ್ಮ ಸಹಿಷ್ಣುತೆ, ಔದಾರ್ಯ, ವಿಶಾಲ ಹೃದಯಗಳಿಗೆ ನಿದರ್ಶನವಾಗಿದೆ. ಸಹಿಷ್ಣುತೆ ಮತ್ತು ಶಾಂತಿಧರ್ಮವನ್ನು ಪ್ರತಿಪಾದಿಸಿದ ಭಕ್ತಿಪಂಥವು ಸಾಹಿತ್ಯ ಸಂಸ್ಕೃತಿಗೆ ನೀಡಿದ ಕೊಡುಗೆ ಸ್ಮರಣೀಯವಾದುದು.

ಕರ್ನಾಟಕದ ಪ್ರಾಚೀನ ಪರಂಪರೆ ಎಂದರೆ ಮೌರ್ಯರಿಂದ ಹಿಡಿದು ಮೈಸೂರು ಅರಸವರೆಗೂ ಎಲ್ಲಾ ಕ್ಷೇತ್ರಗಳಲ್ಲೂ ಸಮೃದ್ಧತೆಯನ್ನು ಕಂಡಿತ್ತು. ಕರ್ನಾಟಕದ ಇತಿಹಾಸವು ಅತಿ ಪುರಾತನವಾದುದು. ಇಲ್ಲಿ ಆಳಿದ ಅರಸರು ಸ್ವತಃ ಕವಿಗಳೂ ಮತ್ತು ಸಾಹಿತ್ಯಾಭಿಮಾನಿಗಳಾಗಿದ್ದರು. ಕರ್ನಾಟಕವನ್ನು ಆಳಿದ ಪ್ರಾಚೀನ ಅರಸರು ಶಾತವಾಹನರು, ಕದಂಬರು, ಗಂಗರು, ಬಾದಾಮಿಯ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಹೊಯ್ಸಳರು, ಕಲಚೂರ್ಯ, ದೇವಗಿರಿಯಾದವರು, ಬಹುಮನಿ ಆದಿಲ್‌ಶಾಹಿ ಒಡೆತನಗಳು, ಮೈಸೂರು ಒಡೆಯರು, ಹೈದರ್ ಟಿಪ್ಪುರವರು ಆಳಿ ಬಾಳಿದವರು. ಕನ್ನಡಿಗರು ಪೋಷಿಸಿಕೊಂಡು ಬಂದಿರುವ ಉನ್ನತ ಸಂಸ್ಕೃತಿಯೊಡಗೂಡಿದ ಪರಂಪರೆಗೆ ಪ್ರೇರಣೆಯಾಗಿದೆ. ಮುಸ್ಲಿಂ ಮಹಿಳೆಯರ ಒಳಬದುಕನ್ನು ಪ್ರಥಮ ಬಾರಿಗೆ ಪರಿಚಯಿಸಿದ ಕೀರ್ತಿ ಸಾರಾ ಅಬೂಬಕ್ಕರ್ ಅವರಿಗೆ ಸಲ್ಲುತ್ತದೆ.

ಸ್ತ್ರೀ ವಿಮೋಚನಾ ಬರವಣಿಗೆಗೆ ಮುಸ್ಲಿಂ ಮಹಿಳಾ ಬರಹಗಾರರು ಅಮೋಘ ಕೊಡುಗೆ ನೀಡಿದ್ದಾರೆ.ಸಾರಾ ಅಬೂಬಕ್ಕರ್, ಬಾನು ಮುಷ್ತಾಕ್ ಮುಂತಾದ ಮುಸ್ಲಿಂ ಜನಾಂಗದ ಸಂವೇದನೆಗಳನ್ನು ಸಾಹಿತ್ಯವಾಗಿ ವಿಶಿಷ್ಟಾಭಿವ್ಯಕ್ತಿ ಪಡೆದುಕೊಂಡು ಮೌಲಿಕವಾದ ಕವಿತೆಗಳನ್ನು ಬರೆದಿರುವರು. ಅಕ್ಬರ್ ಆಲಿ, ನಿಸಾರ್ ಅಹಮದ್, ಫಕೀರ್ ಮಹಮದ್, ಕಟ್ಪಾಡಿ, ಬೊಳುವಾರು ಮಹಮ್ಮದ್ ಕುಂಞ್, ಮುಮ್ತಾಜ್ ಮುಂತಾದ ಮುಸ್ಲಿಂ ಕನ್ನಡ ಲೇಖಕರು ತಮ್ಮ ಬರವಣಿಗೆಯಿಂದ ಅನೇಕ ಉಪಯುಕ್ತ ಬದಲಾವಣೆ ತರಲು ಸಾಧ್ಯವಾಗಿದೆ. ಶಿಶುನಾಳ ಶರೀಫರವರ ತತ್ವ ಜಾನಪದ ಜನಪ್ರಿಯವಾಗಿದ್ದು ಅವರು ಬದುಕಿದ ಅನುಭಾವದ ಜೀವನವು ಹಿಂದೂ ಮುಸ್ಲಿಂರಿಬ್ಬರಿಗೂ ಆದರ್ಶವಾಗಿದೆ. ಹೈದರ್ ಆಲಿಯು ಜಾತಿಯನ್ನು ರಾಜಕೀಯದಿಂದ ಪ್ರತ್ಯೇಕಿಸಿ ತನ್ನ ಜಾತ್ಯಾತೀತ ನೀತಿಯನ್ನು ಪ್ರತಿಪಾದಿಸಿದನು. ಒಂದು ಸಾವಿರ ವರ್ಷಗಳ ಹಿಂದೆ ರಾಷ್ಟ್ರಕೂಟ ದೊರೆ ಅಮೋಘವರ್ಷನೆಂದು ಪ್ರಖ್ಯಾತನಾದ ನೃಪತುಂಗನು ಮಳಖೇಡದಲ್ಲಿ ಆಳುತ್ತಿದ್ದಾಗ ತನ್ನ ಮುಸ್ಲಿಂ ಪ್ರಜೆಗಳಿಗೋಸ್ಕರ ಕರ್ನಾಟಕದಲ್ಲಿಯೇ ಪ್ರಥಮವಾಗಿ ಮಸೀದಿಯನ್ನು ಕಟ್ಟಿಸಿ ಕೊಟ್ಟನೆನ್ನುವ ಸಂಗತಿಯನ್ನು ಅಲ್ತೇಕರರು 'ರಾಷ್ಟ್ರಕೂಟರ ಚರಿತ್ರೆ' ಎಂಬ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ. (ಪಾಟೀಲ್ ಪುಟ್ಟಪ್ಪ ಕರ್ನಾಟಕದ ಕಥೆ)

ಕ್ರೈಸ್ತ ಸಮಾಜದಿಂದ ಬಂದಿರುವ ನಾ. ಡಿಸೋಜರವರು ಕನ್ನಡ ಸಾಹಿತ್ಯಕ್ಕೆ ಅಮೋಘ ಸೇವೆ ಸಲ್ಲಿಸಿದ್ದಾರೆ.ಮಹಿಳಾ ಬರಹಗಾರರಲ್ಲಿ ಫಿಲೋಮಿನಾ ಹಾಗೂ ಪ್ರೆಸಿಲ್ಲಾ ಫರ್ನಾಂಡೀಸ್‌ರವರು ಉತ್ತಮ ಲೇಖಕಿಯರಾಗಿರುವರು.

ದೇಶ ಎಂದೆಂದೂ ಮರೆಯಲಾಗದ ಸಮರ ಸೇನಾನಿ ಸೇನೆಯ ಮೊದಲ ಫೀಲ್ಡ್ ಮಾರ್ಷಲ್ ಜನರಲ್ ಕಾರಿಯಪ್ಪನವರು ಕನ್ನಡದವರು, ಖಗೋಲ ವಿಜ್ಞಾನದ ಸಾಧನೆಗೈದ ಇಸ್ರೋ ಜಾಗತಿಕ ಉದ್ಯಮದ ಐಟಿ-ಬಿಟಿ ಕ್ರಾಂತಿಗೆ ಈ ನೆಲದ ಪ್ರತಿಭೆಗಳು ಮೂಲ, ಹೆಚ್ಚು ಮಠಮಾನ್ಯಗಳು ಇರುವುದು ಕರ್ನಾಟಕದಲ್ಲಿ-ಜಗತ್ತಿನ ಶ್ರೇಷ್ಠ ಇಂಜಿನಿಯರ್ ಎನಿಸಿಕೊಂಡ ಡಾ. ಸರ್.ಎಂ.ವಿಶ್ವೇಶ್ವರಯ್ಯನವರು ನಮ್ಮವರು ಮತ್ತು ಸರ್. ಮಿರ್ಜಾ ಇಸ್ಮಾಯಿಲ್ ಮುಂತಾದವರ ನಿಸ್ವಾರ್ಥ ಸೇವೆಗಳಿಂದ ಮೈಸೂರು ಬ್ರಿಟಿಷ್ ಸಾಮ್ರಾಜ್ಯದಲ್ಲಿಯೇ 'ಮಾದರಿ ರಾಜ್ಯವೆಂಬ' ಕೀರ್ತಿಗೆ ಪಾತ್ರವಾಗಿ, ಅಭಿವೃದ್ಧಿ ಕಾರ್ಯಗಳಲ್ಲಿ ಹಲವು ಪ್ರಥಮಗಳನ್ನು ಸಾಧಿಸಿದೆ.ಗಾಂಧೀಜಿಯವರ ಮಾರ್ಗದರ್ಶನದಲ್ಲಿ ಸ್ವಾತಂತ್ರ್ಯದ ಹೋರಾಟದ ಜೊತೆಗೆ ಹಿಂದು-ಮುಸ್ಲಿಂರ ಐಕ್ಯತೆ, ಅಸ್ಪೃಶ್ಯತಾ ನಿವಾರಣೆ, ಹರಿಜನೋದ್ಧಾರ, ಮದ್ಯಪಾನ ನಿಷೇದ, ನೂಲುವುದು, ಖಾದಿಪ್ರಚಾರ ಮೊದಲಾದ ಸಾಮಾಜಿಕ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ಹೊಸತನ ಹಾಗೂ ತೀವ್ರತೆ ಉಂಟು ಮಾಡಲೂ ಶ್ರಮಿಸಿದರು. ಇದರ ಪರಿಣಾಮವಾಗಿ ಗಾಂಧಿಯವರ ಆದರ್ಶ ಕಲ್ಪನೆಗಳಾದ ಗ್ರಾಮ ರಾಜ್ಯ, ರಾಮರಾಜ್ಯ, ಸರ್ವೋದಯ, ಅಂತ್ಯೋದಯ, ಸ್ವರಾಜ್ಯ, ಸಹಕಾರಿ, ಗ್ರಾಮ ಕೈಗಾರಿಕೆ, ಹರಿಜನ ಸೇವಾ ಸಂಘ ಮೊದಲಾದ ಅನೇಕ ರಚನಾತ್ಮಕ ಕಾರ್ಯಕ್ರಮಗಳು ವಿಶಿಷ್ಟವಾಗಿ ರೂಪುಗೊಂಡವು. ಅ

***ಎಂ.ಎಸ್. ಲಾವಣ್ಯ ಬಸವರಾಜ್***



## ಜನ್ಮ


ಭರಣಿ ಮಳೆ ಧರಣಿ ತಣಿಸಿತು
ಕೃತ್ತಿಕೆಗೆ ಬಿತ್ತನೆ;
ರೋಹಿಣಿ ಮಳೆ ಓಣಿಯೆಲ್ಲಾ ಕೆಸರು ;
ಅರಿದ್ರಾ ಮಳೆ ಅಟ್ಟಾಡಿಕೊಂಡು
ಹೊಡೆಯುವಾಗ
ಗಂಡಸಿನ ಜನ್ಮ "ಹೆಣ್ಣಾಗಿ ಆದರೂ
ಹುಟ್ಟ ಬಾರದಿತ್ತಾ"

ಹಿಟ್ಟಿನ ಮಡಕೆಯ ಮಸಿ ತೊಳೆಯುವಾಗ
"ಹೆಂಗಸಿನ ಬದಲು ಗಂಡಸಾಗಿ
ಹುಟ್ಟ ಬಾರದಿತ್ತಾ"

***ಡಾ. ಅಹಲ್ಯಾ ಚಿಂತಾಮಣಿ***

# ಗಡಿನಾಡಿನಲ್ಲಿ ಕನ್ನಡಕ್ಕಾಗಿ ಹೋರಾಡುತ್ತಿರುವ







ದೇಶವು ಭಾಷಾವಾರು ರಾಜ್ಯಗಳಾಗಿ ವಿಂಗಡಗೊಂಡಾಗ ಅಂದಿನ ಮದರಾಸು ಪ್ರಾಂತ್ಯದಲ್ಲಿದ್ದ ಕನ್ನಡ ಪ್ರದೇಶ ಕಾಸರಗೋಡು ಕೇರಳ ರಾಜ್ಯದ ಪಾಲಾಯಿತು. ಅಂದಿನಿಂದ ಕಾಸರಗೋಡಿನ ಕನ್ನಡಿಗರು ತಮ್ಮ ಪ್ರದೇಶ ಕರ್ನಾಟಕ ರಾಜ್ಯದ ಭಾಗವಾಗಬೇಕೆಂದು ಬಹಳಷ್ಟು ಹೋರಾಟಗಳನ್ನು ಮಾಡಿದರು. ಅದರಲ್ಲಿ ಕಯ್ಯಾರ ಕಿಂಞ್ಞಣ್ಣ ರೈಯವರು ಬಹಳ ಪ್ರಮುಖ ಪಾತ್ರ ವಹಿಸಿದ್ದರು.
ಇದೇ ಜೂನ್ ೮ರಂದು ನೂರು ವರ್ಷಕ್ಕೆ ಕಾಲಿಟ್ಟ ನಾಡೋಜ **ಕಯ್ಯಾರ ಕಿಂಞ್ಞಣ್ಣ ರೈ**ಯವರನ್ನು ನಾಡು ಪುರಸ್ಕಾರ ಮತ್ತು ಗೌರವಾದರಗಳಿಂದ ಅಭಿನಂದಿಸಿತು. **ಅಭಿಮತ**ದ ಓದುಗರಿಗೆ ಅವರ ಒಂದು ಕಿರು ಪರಿಚಯ.

ಕಯ್ಯಾರ ಕಿಂಞ್ಞಣ್ಣ ರೈ ಅವರು ಕಾಸರಗೋಡು ಜಿಲ್ಲೆಯ ಪೆರಡಾಲದಲ್ಲಿ 1915 ಜೂನ್ 8ರಂದು ಜನಿಸಿದರು. ಅವರ ತಂದೆ ದುಗ್ಗಪ್ಪ ರೈ ಮತ್ತು ತಾಯಿ ದೈಯ್ಯಕ್ಕೆ. ಕಿಂಞ್ಞಣ್ಣ ರೈ ಅವರು ಬದಿಯಡ್ಕದಲ್ಲಿ ತಮ್ಮ ಶಾಲಾ ವಿದ್ಯಾಭ್ಯಾಸ ಮುಗಿಸಿದರು. ನಂತರ ನೀರ್ಚಾಲಿನ  ಮಹಾಜನ ಸಂಸ್ಕೃತ ಕಾಲೇಜಿನಲ್ಲಿ ಕನ್ನಡ ಮತ್ತು ಸಂಸ್ಕೃತ ಭಾಷೆಗಳನ್ನು ಅಭ್ಯಸಿಸಿ ವಿದ್ವಾನ್ ಪದವಿ ಗಳಿಸಿದರು. ಮುಂದೆ ಅಧ್ಯಾಪಕ ತರಬೇತಿ ಮತ್ತು ಎಂ.ಎ. ಪದವಿಗಳನ್ನು ಗಳಿಸಿಕೊಂಡರು.

ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದಾಗಲೇ ಇವರು ಗಾಂಧೀಜಿಯವರ ಪ್ರಭಾವಕ್ಕೆ ಒಳಗಾದರು. ಆ ಸಂದರ್ಭದಲ್ಲಿ ನಡೆಯುತ್ತಿದ್ದ ಉಪ್ಪಿನ ಸತ್ಯಾಗ್ರಹ ಇವರ ಮೇಲೆ ತೀವ್ರ ಪ್ರಭಾವ ಬೀರಿತು. ಗಾಂಧೀಜಿಯವರನ್ನು ನೋಡಬೇಕೆಂದು ಕಾಲ್ನಡಿಗೆಯಲ್ಲಿ ಪೆರಡಾಲದಿಂದ ಮಂಗಳೂರಿನ ಕೊಡಿಯಾಲ ಬೈಲಿಗೆ ಹೋದರು. ಅಲ್ಲಿ ಗಾಂಧೀಜಿಯನ್ನು ಕಂಡ ನಂತರ ಆ ಅನುಭವವನ್ನು  ಕುರಿತು 'ಗಾಂಧೀ ದರ್ಶನ' ಎನ್ನುವ ಪದ್ಯ ರಚಿಸಿದರು. ಉಪ್ಪಿನ ಸತ್ಯಾಗ್ರಹ ಮತ್ತು ಗಾಂಧೀಜಿ ಅವರ ಮೇಲೆ ಪ್ರಭಾವ ಬೀರಿದ ವಿಷಯಗಳಲ್ಲಿ ಪ್ರಮುಖವಾದವು. ಅದು ಅವರ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಸಹ ಮುಖ್ಯ ಅಂಶಗಳಾಯಿತು.

ಭಾಷಾವಾರು ಪ್ರಾಂತ್ಯ ರಚನೆಯ ಚಳುವಳಿಗಳಲ್ಲಿ ಭಾಗವಹಿಸಿದರು. ಕಾಸರಗೋಡು ಕೇರಳಕ್ಕೆ ಸೇರಿದಾಗ ಅದನ್ನು ಪ್ರತಿಭಟಿಸಿ ಹೋರಾಟ ನಡೆಸಿದರು. ಕಾಸರಗೋಡಿನಲ್ಲಿ ಕನ್ನಡ ಜಾಗೃತಿ ಮೂಡಿಸುವ ಸಲುವಾಗಿ 1947 ರಿಂದ 1988ರವರೆಗೆ ಕನ್ನಡ ಸಾಹಿತ್ಯ

# ಕಯ್ಯಾರ ಕಿಂಞ್ಞಣ್ಣ ರೈ



ಸಮ್ಮೇಳನಗಳನ್ನು ಸಂಘಟಿಸಿದರು. ಕರ್ನಾಟಕ ರಾಜ್ಯದ ಗಡಿ ಉಪದೇಶಕ ಸಮಿತಿಯ ಸದಸ್ಯರಾಗಿ, ಕೇರಳ ಸರಕಾರದ ಅಲ್ಪ ಸಂಖ್ಯಾತ ಸಮುದಾಯದ ಸಮಿತಿ ಸದಸ್ಯರಾಗಿ ಕಾರ್ಯ ನಿರ್ವಹಿಸಿದರು.

1945ರಲ್ಲಿ ನವೋದಯ ಶಾಲೆಯಲ್ಲಿ ಶಿಕ್ಷಕರಾಗಿ ವೃತ್ತಿಜೀವನ ಆರಂಭಿಸಿದ ಕಯ್ಯಾರರು ಆದರ್ಶ ಶಿಕ್ಷಕರಾಗಿದ್ದರು. ಗಾಂಧೀಜಿಯವರ ತತ್ವ ಸಿದ್ಧಾಂತಗಳನ್ನು ವಿದ್ಯಾರ್ಥಿಗಳಲ್ಲಿ ಬಿತ್ತಿದರು. ಅವರ ಸೇವೆಯನ್ನು ಗುರುತಿಸಿ 1969ರಲ್ಲಿ ಅವರಿಗೆ ಆದರ್ಶ ಶಿಕ್ಷಕ ಪ್ರಶಸ್ತಿ ನೀಡಲಾಯಿತು. ಶಾಲಾ ವಿದ್ಯಾರ್ಥಿಗಳಿಗಾಗಿ ಪಠ್ಯಪುಸ್ತಕ ಹಾಗೂ ವ್ಯಾಕರಣ ಪುಸ್ತಕಗಳನ್ನು ರಚಿಸಿದ್ದಾರೆ. 'ನವೋದಯ ಕನ್ನಡ ವಾಚನಮಾಲೆ' ಅವರ ಜನಪ್ರಿಯ ಪುಸ್ತಕಗಳಲ್ಲಿ ಒಂದು.

ಬಾಲ್ಯದಲ್ಲಿ ಯಕ್ಷಗಾನ, ತಾಳಮದ್ದಲೆಗಳ ಒಡನಾಟದಲ್ಲಿ ಬೆಳೆದು ಬಂದ ಕಯ್ಯಾರರಿಗೆ ಚಿಕ್ಕಂದಿನಿಂದಲೇ ಸಾಹಿತ್ಯದ ಕಡೆ ಒಲವು ಬೆಳೆದಿತ್ತು. 'ಶ್ರೀಮುಖ', 'ಐಕ್ಯಗಾನ', 'ಪುನರ್ನವ', ಚೇತನ, ಕೊರಗ ಮತ್ತು ಇತರ ಕವನಗಳು, ಗಂಧವತೀ, ಶತಮಾನದ ಗಾನ, ಇತ್ಯಾದಿ ಇವರ ಕವನ ಸಂಕಲನಗಳು. 1992ರಲ್ಲಿ ಪ್ರಕಟವಾದ 'ಪ್ರತಿಭಾ ಪಯಸ್ವಿನೀ' ಬೃಹತ್ ಕಾವ್ಯ ಸಂಪುಟದಲ್ಲಿ ಅವರ ಸಮಗ್ರ ಕವನಗಳನ್ನು ಕಾಣಬಹುದು. ಅನ್ನದೇವರು ಮತ್ತು ಇತರ ಕಥೆಗಳು, ಲಕ್ಷ್ಮೀಶನ ಕತೆಗಳು, ಕೈಯಾರರ ಕಥೆಗಳು ಇವರ ಕಥಾಸಂಕಲನಗಳು. ಇವರು ಸಿದ್ಧಹಸ್ತರು. ಕಾರ್ನಾಡ ಸದಾಶಿವರಾಯರು, ಗೋವಿಂದ ಪೈ, ಹಲವು ರಾಷ್ಟ್ರನಾಯಕರನ್ನು ಕುರಿತಾದ ರತ್ನರಾಶಿ ಹೊತ್ತಿಗೆಗಳನ್ನು ಪ್ರಕಟಿಸಿದ್ದಾರೆ. ವಿರಾಗಿಣಿ ನಾಟಕ ಮತ್ತು ಹಲವು ಭಾಷಣಗಳು ಲೇಖನಗಳ ಕೃತಿಗಳು ಪ್ರಕಟಗೊಂಡಿವೆ. ಇವರ ಸಾಹಿತ್ಯದಲ್ಲಿ ನಾಡು-ನುಡಿ ಪ್ರೇಮ, ಸಂಸ್ಕೃತಿ ಚಿಂತನೆಗಳನ್ನು ಕಾಣಬಹುದು.

ಕಯ್ಯಾರರು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹಲವು ಪ್ರಶಸ್ತಿಗಳನ್ನು ಪಡೆದಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಸ್ವಾತಂತ್ರ್ಯಯೋಧ ಪ್ರಶಸ್ತಿ, ಉತ್ತಮ ಕನ್ನಡಚಳುವಳಿಗಾರ ಪ್ರಶಸ್ತಿ, ಅಖಿಲ ಭಾರತ ಜನಪರ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಕನ್ನಡ ಕುಲಭೂಷಣ ಬಿರುದು, 66ನೆಯ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ, ಮಂಗಳೂರು ವಿವಿಯ ಗೌರವ ಡಾಕ್ಟರೇಟ್ ಹೀಗೆ ಹತ್ತು ಹಲವು ಪ್ರಶಸ್ತಿಗಳು ಇವರನ್ನು ಅರಸಿ ಬಂದಿವೆ. ಅ

*ಅಭಿಮತ ವರದಿ*

## ದೆಹಲಿಯಲ್ಲಿ ತುಳು ರಂಗಕ್ರಿಯಾ ಕಮ್ಮಟ

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು ಮತ್ತು ದೆಹಲಿ ತುಳು ಸಿರಿ ಸಂಯುಕ್ತ ಆಶ್ರಯದಲ್ಲಿ ಮೂರು ದಿನಗಳ ತುಳು ರಂಗಕ್ರಿಯಾ ಕಮ್ಮಟವನ್ನು ದೆಹಲಿ ಕರ್ನಾಟಕ ಸಂಘದ ಆವರಣದಲ್ಲಿ 2014 ಜುಲೈ 25, 26 ಮತ್ತು 27ರಂದು ಏರ್ಪಡಿಸಲಾಗಿದೆ. ಕಮ್ಮಟದಲ್ಲಿ ಪರಿಣಿತರಿಂದ ನಾಟಕ ಅಭಿನಯ ಮತ್ತು ಪ್ರದರ್ಶನದ ವಿವಿಧ ಅಂಶಗಳ ಕುರಿತು ಸಿದ್ಧಾಂತ ಹಾಗೂ ಪ್ರಾತ್ಯಕ್ಷಿಕ ವಿವರಗಳನ್ನು ನೀಡಲಾಗುವುದು.
ಕಮ್ಮಟದ ಸಂಪನ್ಮೂಲ ವ್ಯಕ್ತಿಗಳಾಗಿ
ಸಖಾರಾಮ ಉಪ್ಪೂರು, ಬಾಲಕೃಷ್ಣ ನಾಯ್ಕ್ ಡಿ., ಪ್ರಕಾಶ್ ಶೆಟ್ಟಿ ಉಳೆಪಾಡಿ ಮತ್ತು ರವೀಂದ್ರ ಎಸ್. ಬೆಳ್ಳೆ ಪಾಲ್ಗೊಳ್ಳಲಿದ್ದಾರೆ.
ದೆಹಲಿ ತುಳು ಸಿರಿಯ ಕಾರ್ಯದರ್ಶಿ ಅಲೋಕ್ ರೈ (9910035383) ಅವರನ್ನು ಸಂಪರ್ಕಿಸಬಹುದು.

## ದೆಹಲಿ ಕನ್ನಡ ಶಾಲೆಯಲ್ಲಿ ಭರತಾದ್ರಿ ದಂಪತಿಗಳಿಗೆ ವಿದಾಯ





ದೆಹಲಿ ಕನ್ನಡ ಎಜ್ಯುಕೇಶನ್ ಸೊಸೈಟಿಯ ಆಶ್ರಯದಲ್ಲಿ ಶ್ರೀ ಆರ್. ಭರತಾದ್ರಿ ಹಾಗೂ ಶ್ರೀಮತಿ ಉಷಾ ಭರತಾದ್ರಿ ಅವರಿಗೆ ಆತ್ಮೀಯ ವಿದಾಯವನ್ನು ಕೋರಲಾಯಿತು. ಸಂಸ್ಥೆಯ ಅಧ್ಯಕ್ಷ ಶ್ರೀ ಎಸ್. ಕೃಷ್ಣ ಭಟ್ ಅವರು ಮಾತನಾಡಿ ಭರತಾದ್ರಿ ದಂಪತಿಯವರ ಕೊಡುಗೆಗಳನ್ನು ಸ್ಮರಿಸಿದರು.

## ಶ್ರೀಮತಿ ಸುಷ್ಮ ಭಿಡೆಯವರಿಗೆ ಬೀಳ್ಕೊಡುಗೆ



ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಷನ್‌ನ ಸದಸ್ಯೆಯಾಗಿ ಸುಮಾರು 9 ವರ್ಷಗಳಿಂದ ಸಕ್ರೀಯವಾಗಿ ಎಲ್ಲಾ ಕಾರ್ಯಕ್ರಮಗಳಲ್ಲೂ ಭಾಗವಹಿಸುತ್ತಿದ್ದ ಸುಷ್ಮಾ ಭಿಡೆಯವರು ತಮ್ಮ ಪತಿಯ ವರ್ಗಾವಣೆಯ ನಿಮಿತ್ತ ದೆಹಲಿಯಿಂದ ಚೆನ್ನೈಗೆ  ಸ್ಥಳಾಂತರಿಸುತ್ತಿರುವ ಕಾರಣ ಅವರನ್ನು ದಿನಾಂಕ 18.06.2014ರಂದು ತುಂಬು ಹೃದಯದಿಂದಬೀಳ್ಕೊಡಲಾಯಿತು. ಸುಷ್ಮಾರವರು ಅಂದು ಊಟದ ವ್ಯವಸ್ಥೆಯನ್ನು ಮಾಡಿಸಿದ್ದರು.

*ದೀನಾಜಾಯ್ಸ್*

## ಹೊಸ ರಾಜ್ಯ ಸಭಾ ಸದಸ್ಯರು



ಶ್ರೀ ಬಿ.ಕೆ. ಹರಿಪ್ರಸಾದ್ ಅವರು ಇತ್ತೀಚೆಗೆ ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆಯಾದರು.



ಶ್ರೀ ರಾಜೀವ್ ಗೌಡ ಅವರು ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆಯಾದರು.

## ವಿಶೇಷಾಂಕ ಬಿಡುಗಡೆ




ದಿಲ್ಲಿಯಲ್ಲಿ ಕಳೆದ 30ವರ್ಷಗಳಿಂದ ಪ್ರಕಟವಾಗುತ್ತಿರುವ ತುಳು ಮಾಸ ಪತ್ರಿಕೆ ತುಳುವೆರ್‌ನ 30ನೇ ವಿಶೇಷಾಂಕವನ್ನು ಕೇಂದ್ರ ಸರ್ಕಾರದ ರೈಲ್ವೆ ಸಚಿವ ಡಿ.ವಿ. ಸದನಾಂದ ಗೌಡ ಅವರು ಜೂನ್ 25ರಂದು  ದಿಲ್ಲಿಯಲ್ಲಿ ಬಿಡುಗಡೆ ಮಾಡಿದರು. ಪತ್ರಿಕೆ ಸಂಪಾದಕ ಬಾ.ಸಾಮಗ ಅವರು ಚಿತ್ರದಲ್ಲಿದ್ದಾರೆ.

# ಕಲ್ಪನಾ ದಾಸ್ ಹೆಚ್ಚಿನ ವ್ಯಾಸಂಗಕ್ಕಾಗಿ ಜರ್ಮನಿಗೆ



ಕುಮಾರಿ ಕಲ್ಪನಾ ದಾಸ್ ಎಂ.ಎಸ್ಸಿ ಅಧ್ಯಯನದ ನಂತರ ಈಗ ಹೆಚ್ಚಿನ ವ್ಯಾಸಂಗಕ್ಕಾಗಿ ಜರ್ಮನಿಗೆ ತೆರಳಿದ್ದಾರೆ. ದೆಹಲಿಯಲ್ಲಿ ಎಂ.ಎಸ್ಸಿ ಮುಗಿಸಿದ ನಂತರ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ಎರಡು ವರ್ಷ ಸಂಶೋಧನೆಯನ್ನು ಪೂರ್ತಿಗೊಳಿಸಿದ್ದಾಳೆ. ಪ್ರಾಣಿ ಶಾಸ್ತ್ರ ಅಧ್ಯಯನದಲ್ಲಿ ಪಿ.ಎಚ್.ಡಿಗಾಗಿ ಜರ್ಮನಿಯ ಬರ್ಲಿನ್ ವಿಶ್ವವಿದ್ಯಾಲಯದಲ್ಲಿ ಅವಕಾಶ ದೊರೆತಿದೆ. ಜರ್ಮನಿಯ DAAD ಸಂಸ್ಥೆ ಈಕೆಯ ಪ್ರತಿಭೆಯನ್ನು ಗುರುತಿಸಿ ಜರ್ಮನಿಗೆ ಬರಮಾಡಿಕೊಂಡಿದೆ. ವ್ಯಾಸಂಗದ ವೇಳೆ ವಿದ್ಯಾರ್ಥಿ ವೇತನವನ್ನು ಕೂಡ ಈ ಸಂಸ್ಥೆ ನೀಡುತ್ತಿದೆ. ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಕರ್ನಾಟಕದ ಮಾಜಿ ಸಚಿವೆ, ಅಕ್ಕಮಹಾದೇವಿ ಸಮಿತಿ, ಉಡತಡಿಯಿಂದ ಶ್ರೀಮತಿ ಲೀಲಾದೇವಿ ಆರ್ ಪ್ರಸಾದ್ ಅವರು ದೆಹಲಿ ಕರ್ನಾಟಕ ಸಂಘಕ್ಕೆ ನೀಡಿರುವ ರೂ.10,000/– ಮತ್ತು ಕರ್ನಾಟಕ ಸಂಘದಿಂದ ರೂ. 15,000/– ಸೇರಿಸಿ ಒಟ್ಟು ರೂ.25,000/–ವನ್ನು ದೆಹಲಿ ಕರ್ನಾಟಕ ಸಂಘ ನೀಡಿ ಕಲ್ಪನಾ ದಾಸ್ ಅವರ ಪ್ರತಿಭೆಯನ್ನು ಪ್ರೋತ್ಸಾಹಿಸಿದೆ. ಈಕೆ ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ ಶ್ರೀ ಎ.ವಿ.ಚಿತ್ತರಂಜನ್ ದಾಸ್ ಮತ್ತು ಶ್ರೀಮತಿ ಗಾಯತ್ರಿ ದಾಸ್ ಅವರ ಸುಪುತ್ರಿ. ಅ

---

## ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್** ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 20 ಜುಲೈ 2014ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ** ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 20 ಜುಲೈ 2014ರಂದು ಸಾಯಂಕಾಲ 4 ಗಂಟೆಯಿಂದ.


**ಭೀಮ್ ಭಟ್** ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ 27 ಜುಲೈ 2014 ರಂದು ಸಾಯಂಕಾಲ 4 ಗಂಟೆಯಿಂದ.

‘ದೆಹಲಿ ಕರ್ನಾಟಕ ಸಂಘದ ಅಭಿಮತ’ ಸಂಘದ ಸದಸ್ಯರಿಗೆ ಸಂಘದಲ್ಲಿ ನಡೆಯುತ್ತಿರುವ ಕಾರ್ಯಕ್ರಮಗಳ ಮತ್ತು ಬೆಳವಣಿಗೆಗಳ ಕುರಿತು ಮಾಹಿತಿ ನೀಡಲು ಪ್ರಕಟವಾಗುತ್ತಿದೆ. ಅಲ್ಲದೇ ಸ್ಥಳೀಯ ಬರಹಗಾರರಿಗೆ ತಮ್ಮ ಸಾಹಿತ್ಯಿಕ ರಚನೆಗಳನ್ನು ಪ್ರಕಟಿಸಲೂ ಒಂದು ವೇದಿಕೆಯಾಗಿದೆ. ಅಭಿಮತದ ಕುರಿತಾದ ನಿಮ್ಮ ಸಲಹೆಗಳಿಗೆ ಸ್ವಾಗತ. ನಿಮ್ಮ ಬರಹಗಳನ್ನು ದೆಹಲಿ ಕರ್ನಾಟಕ ಸಂಘಕ್ಕೆ ಇಮೇಲ್ ಮೂಲಕ ಕಳುಹಿಸಬಹುದು.

**(dksangha@gmail.com)**

ಓದುಗರ ಪತ್ರಗಳನ್ನೂ ಇದೇ ಇಮೇಲ್ ವಿಳಾಸಕ್ಕೆ ಕಳುಹಿಸಿಕೊಡಬಹುದು. ಅ

***ಸಂಪಾದಕ ಮಂಡಳಿ***



## “ಅವ್ವಾ”

“ಅವ್ವಾ” ಎಂದೊಮ್ಮೆ ಕೂಗಿದರೆ ಸಾಕು
ಎಲ್ಲಿದ್ದರೂ ಓಡಿ ಬರುವಳು ತಾಯಿ.
ಅವ್ವಾ ಎಂದೊಮ್ಮೆ ನರಳಿದರೆ ಸಾಕು
ತಲೆಮೇಲೆ ಕೈಯಿಟ್ಟು ರಮಿಸುವಳು ಮಾಯಿ

ನವರಸಗಳೆಲ್ಲವೂ ಒಂದೇ ರಸದಲಿ ಸೇರಿ
“ಅವ್ವ” ಎಂಬುವ ಶಬ್ದ ಸೃಷ್ಟಿಯಾಗಿ
ನರನರಗಳಲ್ಲೆಲ್ಲ ಪ್ರೀತಿ–ಪ್ರೇಮವ ಬೀರಿ
‘ಅವ್ವ’ ಸುಳಿದಾಡುವಳು ನವಶಕ್ತಿಯಾಗಿ.

ಕರುಳಬಳ್ಳಿಯ ‘ಅವ್ವ’ ಸರಳ ಹೃದಯದ ‘ಅವ್ವ’
ಬೆರಳೆತ್ತಿ ಆಡಿಸಿದ ಮಮತೆಯಾ ‘ಅವ್ವ’
ಎಂದಿಗೂ ಕೈಬಿಡದ ಕರುಣೆಯಾ ‘ಅವ್ವ’
ದೇವರಿಗೂ ಮೀರಿದಾ ತಾಯಿ ‘ನಮ್ಮವ್ವ’

***ಸುಧಾಕರ ಕುರಂದವಾಡ***



# ಅಮ್ಮನ ಮಗಳು

ಮಗು ಮಾತು ಕಲಿತು ಆಡುವ ಚೊಚ್ಚಲ ಪದ 'ಅಮ್ಮಾ'. ಅಥವಾ ಅಮ್ಮ ಕಲಿಸಿದ ಭಾಷೆಯಲ್ಲಿ ತನಗೆ ಮೊಲೆಯೂಡಿಸಿದವಳನ್ನು ಕರೆಯುವ ಪದ. ಅಮ್ಮ ಕಲಿಸಿದ ಭಾಷೆಯ ಮೂಲಕ ಮಗುವು ಈ ಲೋಕವನ್ನು ಪರಿಚಯಿಸುತ್ತಾ, ಅರ್ಥೈಸುತ್ತದೆ. ತಾನಿನ್ನೂ ತಿಳಿಯದ ಸೋಜಿಗಗಳನ್ನು ತನ್ನ ಅಂತರದೊಳಗೆ ಸೇರಿಸಿಕೊಳ್ಳುತ್ತದೆ. ಅದೇ ಮಗು ಹುಟ್ಟಿ ಒಂದೆರಡು ವರ್ಷಗಳಲ್ಲಿ ತನ್ನ ಕಾಲಲ್ಲಿ ತಾನೇ ನಿಂತು ತಾನು ಹುಟ್ಟಿದ ಹೊಸ ಜಗತ್ತಿನ ಕುರಿತು ಅರಿತುಕೊಳ್ಳಲು ಪ್ರಯತ್ನ ಪಡುತ್ತದೆ. ಮಗುವಿನ ಅರಿವಿನ ದಾಹವನ್ನು ತಮ್ಮಿಂದಷ್ಟೇ ತೀರಿಸಲಾಗದಿರುವುದರಿಂದ ನೈಜವಾಗಿ ಹೆತ್ತವರು ಮಗುವನ್ನು ವಿದ್ಯಾಲಯಕ್ಕೆ ಕಳುಹಿಸುತ್ತಾರೆ. ಅಲ್ಲಿ ಏನನ್ನು ಹೇಗೆ ಕಲಿಸಬೇಕು ಎನ್ನುವುದರ ಕುರಿತು ನಿರ್ಧರಿತವಾದ ಪಠ್ಯಕ್ರಮವಿರುತ್ತದೆ.

ಅಭಿವೃದ್ಧಿಯ ಬೆಳವಣಿಗೆಯೊಂದಿಗೆ ಹೊಸ ಆಕಾಂಕ್ಷೆಗಳನ್ನು ಹೊತ್ತು ಹೊರಟಿರುವ ಈಗಿನ ತಲೆಮಾರು ಹಲವು ಗೋಜಲುಗಳನ್ನು ಸೃಷ್ಟಿಸಿದೆ. ಅದರಲ್ಲಿ ಮಕ್ಕಳಿಗೆ ಯಾವ ಭಾಷೆಯಲ್ಲಿ ಶಿಕ್ಷಣ ನೀಡಬೇಕು ಎನ್ನುವುದರ ಕುರಿತು ಕೂಡಾ ಒಂದು. ಇತ್ತೀಚೆಗೆ ಸುಪ್ರೀಂ ಕೋರ್ಟ್ ನೀಡಿದ ತೀರ್ಪು ಯಾವ ಭಾಷೆಯಲ್ಲಿ ಶಿಕ್ಷಣ ನೀಡಬೇಕು ಎನ್ನುವುದು ಮಕ್ಕಳ ಹೆತ್ತವರ ನಿರ್ಧಾರ ಹೊರತು ಸರಕಾರದ ನಿರ್ಧಾರವಾಗಬಾರದು ಎಂದಿದೆ.

ಕನ್ನಡ ಭಾಷೆಯ ಉಳಿವು, ಬೆಳವಣಿಗೆಯ ಕುರಿತು ಕೆಲಸಮಾಡುತ್ತಿರುವ ದೆಹಲಿ ಕರ್ನಾಟಕ ಸಂಘದಲ್ಲಿ ಕೂಡಾ ಕನ್ನಡದಲ್ಲಿ ಪ್ರಾಥಮಿಕ ಶಿಕ್ಷಣ ಕುರಿತು ಕೆಲವೊಂದು ಚರ್ಚೆಗಳನ್ನು ಆರಂಭಿಸಲಾಗಿದೆ. ಸದಸ್ಯರು ಮತ್ತು ಅಭಿಮತದ ಓದುಗರು ಈ ಚರ್ಚೆಯನ್ನು ಈ ಪತ್ರಿಕೆಯ ಪುಟಗಳಲ್ಲೂ ಮುಂದಿನ ಸಂಚಿಕೆಯಿಂದ ಮುಂದುವರಿಸಬಹುದು.

ಅಭಿಮತದ ಹುಟ್ಟು ದೆಹಲಿಯ ಕನ್ನಡಿಗರ ಇತಿಹಾಸದ ಮೆಟ್ಟಿಲಿನ ಮಹತ್ತರವಾದ ಅಡಿಪಾಯವಾದರೆ, ಅಭಿಮತದ ಪ್ರಕಟಣೆ ವಿವಿಧ ಕಾರಣಗಳಿಂದ ಕುಂಠಿತವಾಗಿದ್ದಾಗ ಅದಕ್ಕೆ ಮರುಜೀವ ಕೊಟ್ಟು ಮತ್ತೆ ಇನ್ನಿಲ್ಲದ ಎತ್ತರಕ್ಕೆ ಏರಿಸಿದವರಲ್ಲಿ ವಸಂತ ಶೆಟ್ಟಿ ಬೆಳ್ಳಾರೆ ಮತ್ತು ಉಷಾ ಭರತಾದ್ರಿ ಪ್ರಮುಖರು. ಅಭಿಮತವನ್ನು ತನ್ನ ಮಗಳೆಂದು ಪ್ರೀತಿಸಿದ ಉಷಾ ಭರತಾದ್ರಿ ಅವರು ದೆಹಲಿಯಿಂದ ತವರೂರಿಗೆ ಹೊರಟ ಸಂದರ್ಭದಲ್ಲಿ ಅಭಿಮತವು ಅವರ ಮಮತೆಯನ್ನು ಕಳೆದುಕೊಳ್ಳುವ ಅಳುಕಿನೊಂದಿಗೆ ಅವರಿಗೆ ಶುಭವಿದಾಯ ಕೋರುತ್ತಿದೆ. ಅ

*ಬಾಲಕೃಷ್ಣ ನಾಯ್ಕ್ ಡಿ.*

# ಕನ್ನಡ ಭಾಷೆ ಉಳಿಸೋಣ ಬನ್ನಿ

"ಎಲ್ಲಾದರು ಇರು ಎಂತಾದರು ಇರು
ಎಂದೆಂದಿಗೂ ನೀ ಕನ್ನಡವಾಗಿರು"

"ಕನ್ನಡಕೆ ಹೋರಾಡು ಕನ್ನಡದ ಕಂದ
ಕನ್ನಡವ ಕಾಪಾಡು ನನ್ನಾನಂದ
ಜೋಗುಳದ ಹರಕೆ ಇದು ಮರೆಯದಿರು
ಚಿನ್ನಾ ಮರೆತೆಯಾದರೆ ಆಯ್ಯೋ
ಮರೆತಂತೆಯೆನ್ನ"

ಇಂತಹ ನೂರಾರು ಕವಿ ಊಕ್ತಿಗಳು ಇಂದು ನಮಗೆ ಅತ್ಯಂತ ಅನಿವಾರ್ಯವಾಗಿ ಅಳವಡಿಸಿಕೊಳ್ಳಬೇಕಾದ ಕವಿವಾಣಿಗಳಾಗಿ ಪರಿಣಮಿಸಿವೆ.

ಕನ್ನಡ ಭಾಷೆ, ಸಂಸ್ಕೃತಿ ಮತ್ತು ನಾಡು ಇಂದು ಪ್ರತಿಯೊಬ್ಬ ಕನ್ನಡಿಗನನ್ನು ತನ್ನತ್ತ ಕೈ ಬೀಸಿ ಕರೆಯುತ್ತಿವೆ.

ಇತ್ತೀಚಿನ ಸರ್ವೋಚ್ಚ ನ್ಯಾಯಾಲಾದ "ಮಾಧ್ಯಮದ ಭಾಷೆ" ವಿದ್ಯಾರ್ಥಿಗೆ ಬಿಟ್ಟದ್ದು ಎಂಬ ನಿಲುವು ಇನ್ನು ಆತಂಕ ತರುವಂತಾಗಿದೆ. ದಿನನಿತ್ಯ ಆಂಗ್ಲ ಭಾಷೆಯ ದಾಳಿ ಕನ್ನಡದ ಮೇಲೆ ನಡೆಯುತ್ತಲೇ ಇದ್ದು ರಾಜ್ಯದಾದ್ಯಂತ ಕನ್ನಡ ಶಾಲೆಗಳು ಕನ್ನಡ ಮಾಧ್ಯಮದಲ್ಲಿ ಓದುವ ಮಕ್ಕಳಿಗಾಗಿ ಕಾಯುತ್ತಾ ಕುಳಿತಿರುವಂತೆ ಮಾಡಿವೆ.

ಕನ್ನಡದಲ್ಲಿ ಓದುವ, ಬರೆಯುವ ಕ್ರಿಯೆಯೇ ನಿಂತು ಹೋದರೆ ಕನ್ನಡ ಭಾಷೆ ಹೇಗೆ ತಾನೇ ಉಳಿದೀತು.

ಕನ್ನಡ ನಾಟಕ, ಸಿನೆಮಾ, ಟಿವಿ ಮಾಧ್ಯಮಗಳು ಕೂಡಾ ಬಂಡವಾಳ ಹೂಡುವಿಕೆಯ ಅಭಾವದಿಂದಾಗಿ ಈಗಾಗಲೇ ಕುಂಟಿದೆ. ಕನ್ನಡ ಭಾಷೆ ನಮ್ಮ ಹೊಟ್ಟೆ ಹೊರೆಯುವುದಿಲ್ಲ, ಕನ್ನಡದಲ್ಲಿ ಕಲಿತರೆ ಒಳ್ಳೆಯ ಉದ್ಯೋಗ ದೊರೆಯುವುದಿಲ್ಲ ಎಂಬೆಲ್ಲಾ ತಪ್ಪು ಅರಿವಿನಿಂದಾಗಿ ಇಂದು ಕನ್ನಡ ನಿಧಾನವಾಗಿ ನಶಿಸಿ ಹೋಗುತ್ತಿದೆ. ಇಂತಹ ಒಂದು ಗಂಭೀರ ಸಮಸ್ಯೆಯನ್ನು ಎಲ್ಲಾ ಕನ್ನಡಮ್ಮನ ಕಂದಮ್ಮಗಳು ಒಂದಾಗಿ ಒಗ್ಗಟ್ಟಿನಿಂದ ಎದುರಿಸಿದರೆ ಮಾತ್ರ ನಮ್ಮ ನಾಡು–ನುಡಿ–ಸಂಸ್ಕೃತಿ ಉಳಿಸಬಹುದಾಗಿದೆ. ಅಂತಹ ಒಂದು ಗಟ್ಟಿ ನಿರ್ಧಾರವನ್ನು ಕನ್ನಡಿಗರಾದ ನಾವೆಲ್ಲರೂ ಇಂದು ತೆಗೆದುಕೊಳ್ಳಲೇಬೇಕಾಗಿದೆ. ಒಟ್ಟಾಗಿ ಒಗ್ಗಟ್ಟಿನಿಂದ ಸರ್ಕಾರದ ಮೇಲೆ ಒತ್ತಡ ತಂದು ಕನ್ನಡ ಕಲಿಯುವುದನ್ನು ಕಡ್ಡಾಯ ಮಾಡಿಸಬೇಕಾಗಿದೆ. ಕನ್ನಡ ಕಲಿಯದವರಿಗೆ ಯಾವುದೇ ಅವಕಾಶ ಇಲ್ಲ. ಉದ್ಯೋಗ, ವಿದ್ಯೆ, ವ್ಯಾಪಾರ ಹೀಗೇ ಪ್ರತಿರಂಗದಲ್ಲೂ ಕನ್ನಡವನ್ನು ಕಡ್ಡಾಯಗೊಳಿಸಿ ಜೊತೆಗೆ ಇಂಗ್ಲಿಷ್, ಹಿಂದಿ ಇನ್ನಿತರ ಭಾಷೆಗೆ ಸ್ಥಾನ ನೀಡುವಂತೆ ಹೋರಾಟ ನಡೆಸಬೇಕಾಗಿದೆ. ಅದಕ್ಕಾಗಿಯೇ ಬನ್ನಿ ನಾವೆಲ್ಲಾ ಒಂದಾಗಿ ಕನ್ನಡಕ್ಕಾಗಿ ಹೋರಾಡೋಣ ಕನ್ನಡ ಮಾತೆಯ ಜೋಗುಳದ ಹರಕೆಯನ್ನು ಪೂರೈಸೋಣ. ಅ

*ಸಖಾರಾಮ ಉಪ್ಪೂರು*




## ಓದುಗರ ಪತ್ರ

2014 ನೇ ಜೂನ್ ತಿಂಗಳ "ಅಭಿಮತ"ದ ನೇರಮಾತು ಅಂಕಣದಲ್ಲಿ... ಕರ್ನಾಟಕ ರಾಜ್ಯದ ಇತರ ಭಾಷೆಗಳಾದ ತುಳು ಮತ್ತು ಕೊಡವ ಭಾಷೆಯನ್ನು ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ಸೇರಿಸಲು ಸರಕಾರ ವಿಫಲವಾಗಿದೆ... ಎನ್ನುವ ಅರ್ಥದಲ್ಲಿ ನೀವು ಬರೆದಿರುವ ಅಭಿಪ್ರಾಯ ಚಲೋದಾಗಿದೆ. ಕನ್ನಡಿಗರ ಕಣ್ಮಣಿಯಂತೆ ಪ್ರತೀ ತಿಂಗಳು ಅಂದಚಂದವಾಗಿ ಹೊರಬರುತ್ತಿರುವ "ಅಭಿಮತ"ಕ್ಕೆ ನನ್ನ ಅನಂತಾನಂತ ವಂದನೆ ಹಾಗೂ ಶುಭಾಶಯಗಳು. ಅ

*ಉಳ್ಳಿಯಡ ಎಂ. ಪೂವಯ್ಯ*
*ಮಡಿಕೇರಿ*


**SAUJANYA** PRINTING PRESS
A HOUSE OF QUALITY PRINTING

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ
ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್
ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

C-95, Okhla Industrial Area Phase-I, New Delhi – 110 020

E-MAIL: saujanyapp2010@gmail.com / hpgp2006@gmail.com
PHONE: 011-40520770 MOBILE:9811104398,,9811604398

Delhi Karnataka Sangha Abhimatha Monthly,
July - 2014, Vol. No.24, Issue No.10, Price Rs.1/- RNI Regn. No. 53405/91, DL-SW-1/4016/13-15
Printout Date : July 8th / 9th, Postal Date :10th / 11th, Total Pages-20




Editor: Balakrishna Naik D., Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615 and
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770